ಹರಿಃ ಓಂ

# ವೇದ - ಅಪೌರುಷೇಯತ್ವ

## ಒಂದು ವಿಮರ್ಶೆ

ಶೋಧನೆ ಸಂಗ್ರಹ ಮತ್ತು ವಿವರಣೆ
ಪ್ರೊ॥ ಪಂ॥ ಬದರೀನಾಥಾಚಾರ್ ಘೂಳಿ ಎಂ.ಎ.

ಮಾಧವ ಮಧ್ವ ಪ್ರಕಾಶನ
ನಂ. 164, 7ನೇ ಅಡ್ಡ ರಸ್ತೆ, 9ನೇ ಮುಖ್ಯ ರಸ್ತೆ,
ಬಿ.ಇ.ಎಂ.ಎಲ್. ಬಡಾವಣೆ, 3ನೇ ಹಂತ,
ರಾಜರಾಜೇಶ್ವರಿನಗರ, ಬೆಂಗಳೂರು – 560 098

ಅಕ್ಷರ ಜೋಡಣೆ ಮತ್ತು ವಿನ್ಯಾಸ :
ಪಿ. ಎಸ್. ರಾಘವೇಂದ್ರ
ಬೆಂಗಳೂರು – 560 050
ದೂ : 080 - 22421294

ಹರಿಃ ಓಂ

# ವೇದ - ಅಪೌರುಷೇಯತ್ವ

## ಒಂದು ವಿಮರ್ಶೆ

ವೇದ ಅಂದರೆ ಜ್ಞಾನ. ವಿದ್ = ಜ್ಞಾನೆ. Vid = To know ಇದರಿಂದ ವೇದ Veda = Knowledge - To know.

**ವೇದಗಳು – ಸ್ವರೂಪ ಪ್ರಾಚೀನತೆ ಅಪೌರುಷೇಯತ್ವ**

ವೇದಗಳು ತತ್ವಶಾಸ್ತ್ರ, ಧರ್ಮ, ಸಂಸ್ಕೃತಿಗಳಿಗೆ ತೌರುಮನೆಯಂತೆ ಇರುವುದು. ಇವುಗಳ ಜೊತೆಗೆ ಅರ್ಥಶಾಸ್ತ್ರ, ವೈದ್ಯಶಾಸ್ತ್ರ, ನೀತಿ, ಜ್ಞಾನ, ವಿಜ್ಞಾನ ಕಾಮಶಾಸ್ತ್ರಗಳಿಗೂ ಆಕಾರವಾಗಿರುವುದು. ಇವು ಒಂದು ಜ್ಞಾನಸಮುದ್ರ. ಇದರಲ್ಲಿ ಇಳಿದು ಯಥಾಶಕ್ತಿ ಭಾವುಕತೆಯ ಸ್ಪಂದನೆಗಳಿಗೆ ಸ್ಫೂರ್ತಿ, ಚಿಂತನೆ, ಜಿಜ್ಞಾಸಗಳಿಗೆ ವಿಶೇಷ ವಿಷಯಗಳನ್ನು ಬೋಧಿಸುವುವು. ನಮ್ಮ ಬದುಕು ಪಾಲಿಕವಾಗುವಂತೆ ಪ್ರೇರೇಪಿಸುವ ಉತ್ಕೃಷ್ಟ ಮೇರುಕೃತಿ.

ಈ ರೀತಿ ವೇದಗಳಲ್ಲಿ ಎಲ್ಲವನ್ನು ಕಾಣಬಹುದು. ಇಂತಹ ಸರ್ವತೋಮುಖವಾಗಿ ಭೌತಿಕ, ಅಲೌಕಿಕ, ನಿತ್ಯ ಬದುಕು ಮಾರ್ಗದರ್ಶನ ಮಾಡುವ ಮಹಾಸಾಗರ. ಎಲ್ಲಾ ವಿದ್ಯೆಗಳಿಗೆ ಮೂಲವಾಗಿ ಮನುಷ್ಯ ತಾನು ಬದುಕಲು ಪವಿತ್ರದ ದಾರಿ ಕಡೆ ನಡೆಯುವಂತೆ ಅರಿವನ್ನು ಕೊಡುವುದು. ಇದಕ್ಕಿಂತ ಇನ್ನೊಂದು ಮಹತ್ವದ ವಿಷಯವೆಂದರೆ ಭಗವಂತನ ಚಿಂತನೆ. ಜಿಜ್ಞಾಸಾದಿಗಳಿಂದ ಪರಮಾತ್ಮನ ಸಾಕ್ಷಾತ್ಕಾರದ ಕಡೆಗೆ ಕೊಂಡೊಯ್ಯುವ ಮಹಾಶಕ್ತಿ ವೇದಗಳಲ್ಲಿ ಕಾಣಬಹುದು.

**ಹಾಗಾದರೆ ವೇದವೆಂದರೇನು ವಿಚಾರ ಮಾಡುವ.**

ಪ್ರಥಮತಃ ವೇದಗಳು ಅಪೌರುಷೇಯತ್ವವನ್ನು ಮತ್ತು ನಿತ್ಯತ್ವವನ್ನು ತಿಳಿಯಹೊರಟಿದೆ.

ವೇದ ಎನ್ನುವುದು ಕ್ರಿಯಾಪದವಾಗುವುದು = **To know**. ವೇದಗಳು ಬಹುಸಂಖ್ಯಾತವಾಗಿರುತ್ತದೆ. **''ಅನಂತಾವ್ಯೆ ವೇದಾಃ''** ಆಗ ವೇದಾಃ ಎಂದೇ ಹೇಳಲ್ಪಟ್ಟಿದೆ. ಅರ್ಥ ತಿಳಿದುಕೋ ಅರಿತುಕೋ (ಅನುಭವಿಸು) ಎಂದು.

ವೇದಗಳು **ಅಪೌರುಷೇಯ** = ಅಂದರೆ ಯಾರೂ ಇದನ್ನು ರಚಿಸಿಲ್ಲ. ಪುರುಷಕೃತವಲ್ಲಾ ಜ್ಞಾನಕ್ಕೆ ಗೋಚರವಾದದ್ದು. ಯಾರ ಜ್ಞಾನಕ್ಕೆ ಗೋಚರವಾಯಿತು?

ಇದಕ್ಕೆ ಶ್ರೀಮದ್ಭಾಗವತದಲ್ಲಿ ವಿವರಣೆ ಇದೆ. ೩ನೇ ಸ್ಕಂದ ೯ನೇ ಅಧ್ಯಾಯ ಹಾಗೂ ೧೦ನೇ ಅಧ್ಯಾಯಗಳಲ್ಲಿ ಕಿಂಚಿತ್ ವರ್ಣನೆ ಇದೆ.

ಪದ್ಮನಾಭ ಪರಮಾತ್ಮನ ನಾಭಿಕಮಲದಿಂದ ಬ್ರಹ್ಮದೇವರ ಸೃಷ್ಟಿ. ಅವರೇ ಆದಿ ಬ್ರಹ್ಮದೇವರು. ಹುಟ್ಟಿದ ಕೂಡಲೇ ಸುತ್ತೂ ನೋಡಿದರು. ಎಲ್ಲಿ ನೋಡಿದರೂ ಕತ್ತಲೆ.  ಆಗ ಅವರು ವಿಚಾರ ಮಾಡಿದರು. ನಾನು ಯಾರು ಏನನ್ನು ತಿಳಿಯಬೇಕು. ಆಗ ಅವರಿಗೆ ಶಬ್ದ ಕೇಳಿಸಿತು. **“ತಪ ತಪ ತಪ”** ಎಂದು. ಅಂತೆಯೇ ಸುಮಾರು ೧೦೦೦ ವರ್ಷ ತಪಸ್ಸು ಮಾಡಿದರು. ಪರಮಾತ್ಮನ ಪ್ರೀತನಾಗಿ ವೇದಗಳು ಕೇಳಿಸುವಂತೆ ಮಾಡಿದ ಹೀಗೆ ಬ್ರಹ್ಮದೇವರಿಗೆ ವೇದಗಳು ಕೇಳಿಸಿತು. ಅವೇ ವೇದಗಳಾಗಿ ಅಪಾರುಷೇಯುವೆಂದು ಕೇಳಿಸಿದ ಕಾರಣ (ಕಿವಿಯಿಂದ) **ಶೃತಿ** ಎಂದಾಯಿತು. ಬ್ರಹ್ಮದೇವರ ನಾಲ್ಕು ಮುಖದಿಂದ ನಾಲ್ಕು ವೇದಗಳು ಉಚ್ಚರಿಸಲಾಯಿತು. **ಋಗ್, ಯಜು, ಸಾಮ, ಅಥರ್ವಣ**ವೆಂದಾದವು. ವೇದವಾಕ್ಯಗಳು ಪ್ರಥಮವಾಗಿ ಕೇಳಿ ಅರ್ಥೈಸುತ್ತಿದ್ದರು. ವೇದಗಳು ದರ್ಶನ ಭಾಷೆಯಲ್ಲಿದೆ.

**ವೇದಗಳ ಪ್ರಾಚೀನತೆ :** ಅದರ ಗ್ರಂಥಗಳಲ್ಲಿ ತಿಳಿಸಿರುವುದನ್ನು ಒಂದು ವಿಹಂಗಮ ನೋಟದಿಂದ ತಿಳಿಯುವುದು. **ವೇದ = ಭಗವಂತ,** ನಾರಾಯಣ ಎಂಬ ಯೌಗಿಕಾರ್ಥವಿರುವುದು. **ವೇದ = ಶಬ್ಧರಾಶಿ,** ಶಾಸ್ತ್ರಾಣಿ ವಿಂದಂತಿ ಪ್ರಾಪ್ನುವಂತಿ ಅಸ್ಮಿನ್ ವಿದ್ಯಲ್(ಲಾಭೆ)

ಶಾಸ್ತ್ರಗಳ ಸಾರವನ್ನು ತಿಳಿಸಿಕೊಡುವುದು (ಹೊಂದಿರುವುದು) ವೇದದ ಅರ್ಥ. **ಸಂಕರ್ಷಣತ್ವೇ ಶಾಸ್ತ್ರಾರ್ಥ ಪ್ರದತ್ವಾತ್ ವೇದ ಈ ರೀತಿಃ (ನಿರುಕ್ತಿ)**

ಅ) **ವೇದೇನ ವೈ ದೇವಾಃ ಅಸುರಾಣಾಂ ವಿತ್ತಂ ವೇದ್ಯಮವಿಂದತ** [ತೈತ್ತ.ಸಂ.(೧-೪.೨೦)]

ವೇದಗಳು ಅಸುರರಿಗೆ ಸಂಪತ್ತು. ಭಗವಂತನ ಕೃಪ ಪಡೆಯಲು ಹೇತುವಾದ್ದರಿಂದ ಅಪೌರುಷೇಯ ವಾಕ್ಯರಾಶಿಯೇ ವೇದವೆನಿಸಿದೆ.

ಆ) **ವೇದಿರ್ದವೇಭ್ಯೋ ನಿಲಾಯತ । ತಾಂ ವೇದನಾನ್ವವಿಂದನ್ ।**
**ವೇದೇನವೇದಂ ವಿವಿದುಃ ಪೃಥಿವೀಂ ॥** [ತೈತ್ತರೀಯ ಬ್ರಾಹ್ಮಣ ೩/೩/೯/೬೯]

ದೇಚತೆಗಳು ವೇದಗಳನ್ನು ಅಧ್ಯಯನ ಮಾಡಿ ಪರಮಾತ್ಮನ ಅನುಗ್ರಹದಿಂದಾಗಿ ಸಮಸ್ತ ದೈವೀ ಸಂಪತ್ತನ್ನು ಪಡೆದರು.

ಇ) **ನೇಂದ್ರಿಯಾಣಿ ನಾನುಮಾನಂ ವೇದಾ ಹ್ಯೆವೈನಂ ವೆದಯಂತಿ**
**ಇತಿ ಪಿಪ್ಪಲಾಡಶೃತಿ** [ಶ್ರೀಮದಾಚಾರ್ಯರ ವಿಷ್ಣುತತ್ವನಿರ್ಣಯ ಪು.೨]

ಸರ್ವೇಂದ್ರಿಯಗಳಾದ ಮುಖ್ಯವಾಗಿ ಕಣ್ಣು, ಕಿವಿ, ಮನಸ್ಸು, ಆದಿ, ಇಂದ್ರಿಯಗಳು ಭಗವಂತನನ್ನು ಕಾಣಲೂ ಆಗುವುದಿಲ್ಲ. ಅವನ ವಿಷಯಕ ಜ್ಞಾನ ವೇದಗಳಿಂದ ಮಾತ್ರವೇ ತಿಳಿಯಲಾಗುತ್ತದೆ. ತಸ್ಮಾತ್ ವೇದವೆಂದೆನಿಸಿದೆ.

ಈ) ಜೀವನಿಗೆ ಈ ಸಂಸಾರ ಸಾಗರದಿಂದ ಪಾರುಮಾಡಿ ಅವನಿಗೆ ನಿತ್ಯ ನಿರಂತರ



ಸುಖವನ್ನು ಒದಗಿಸುವುದಕ್ಕಾಗಿ ಸತ್ಕರ್ಮಗಳನ್ನು ತಿಳಿಸಿ ಆಚರಣೆ ಮಾಡುವಂತೆ ಪ್ರೇರೇಪಿಸುವ ಗ್ರಂಥವೇ ವೇದ ಎಂದಿದೆ.

**ನಿಃ ಶ್ರೇಯಸಕರಾಣಿ ಕರ್ಮಣ್ಯಾವೇದಯಂತೀತಿ ವೇದಃ ॥ [ಆಪಸ್ಥಂಭಸೂತ್ರ ಭಾಷ್ಯ ೮-೧೪]**

ಉ) **ವಿನ್ದಂತಿಧರ್ಮಾದಿಕಮನೇನೇತಿ ವೇದಃ** **[ಅಮರಶೋಕ ಟೀಕಾ ೧-೫-೩]**

ಊ) **ಪ್ರತ್ಯಕ್ಷಾನುಮಿತ್ಯಾವಾ ಯಸ್ತೂಪಾಯೋ ನ ಬುಧ್ಯತೇ**
**ಏನಂ ವಿನ್ದಂತಿ ವೇದೇನ ತಸ್ಮಾದ್ವೇದಸ್ಯ ವೇದತಾ ॥**
**ವಿದಂತನಸ್ಯ ಪ್ರಮಾಣ ವೇದ್ಯಂ ಧರ್ಮಲಕ್ಷಣ**
**ಮರ್ಥಮಸ್ಮಾದಿತಿ** **(ಮನುಸ್ಮೃತಿ ಭಾಷ್ಯ ೨-೬)**

ಯಾವ ಪರತತ್ವ ಜ್ಞಾನವನ್ನು ಅನುಮಾನಗಳಿಂದ ತಿಳಿಸಲಾಗದೋ ಅಂಥ ಪರಮಾತ್ಮನ ಜ್ಞಾನವನ್ನು ಕೊಡುವುದರಿಂದ ಅಪೌರುಷೇಯವಾದ ವೇದ ರಾಶಿಯನ್ನು ವೇದವೆನಿಸಿದೆ.

ಹೀಗೆ ಹಿಂದಿನ ಋಷಿಮುನಿಗಳು ತಿಳಿಸಿದಂತೆ ವಿಚಾರಮಾಡಿದಾಗ ವೇದಗಳ ಮುಖ್ಯ ಉದ್ದೇಶವು ಧರ್ಮ, ಸ್ವರ್ಗ ಮೋಕ್ಷ ಶ್ರೀಮನ್ನಾರಾಯಣನನ್ನು ತಿಳಿಸುವುದೇ ಆಗಿರುತ್ತದೆಂದು ಸ್ಪಷ್ಟವಾಗಿ ತಿಳಿದುಬರುವುದು. **“ಸರ್ವೋತ್ಕರ್ಷೇ ದೇವದೇವಸ್ಯ ಶಾಸ್ತ್ರಾಣಾಂ ಮಹಾತಾತ್ಪರ್ಯಂ”** ಆಚಾರ್ಯ ಶ್ರೀಮಧ್ವರು  ವೇದಗಳೆಲ್ಲ ಪ್ರತಿಯೊಂದು ಶಬ್ದ, ವರ್ಣ, ಸ್ವರಗಳು ಭಗವಂತನ ಸರ್ವೋತ್ತಮತ್ವವನ್ನು ವರ್ಣಿಸುವುದೆಂದು ಸಾಧಿಸಿರುತ್ತಾರೆ. ಅಲ್ಲದೇ ಮೇಘಗಳ ಘರ್ಜನೆ ಸಮುದ್ರಗಳ ಅಲೆಗಳಿಂದ ಭೋರ್ಗರತೆ ಗುಡುಗು, ಪಕ್ಷಿಜಂತುಗಳ ನಿನಾದ ಇತ್ಯಾದಿ ಎಲ್ಲವೂ ಶ್ರೀಹರಿಯ ಮಹಿಮೆಯನ್ನೇ ಧ್ವನ್ಯಾತ್ಮಕ ಶಬ್ದಗಳು ವರ್ಣಿಸುವುದೆಂದು ಆಚಾರ್ಯರು ತಿಳಿಸಿರುತ್ತಾರೆ.

**ಸರ್ವೈಶ್ಚ ವೈದಿಕ ಪದ್ಯೆರಪಿ ಲೋಕಶಬ್ದೈಃ**
**ಮೇಘಾಗ್ನಿವಾರಿದ ತಲಾದಿರವೈಶ್ಚ ಸರ್ವೇಃ ।**
**ಏಕೋಽಭಿದೇಯ ಪರಿಪೂರ್ಣಗುಣಃ ಸದಾಽಲಂ**
**ನಾರಾಯಣೋ ಮಮ ಸದೈವ ಸತುಷ್ಟಿಯೋಮೇತು ॥**

ಈ ರೀತಿ ವೇದಗಳ ಉದ್ದೇಶವನ್ನು ಯಥಾರ್ಥವಾಗಿ ಪಠಣ ಮಾಡಿದಾಗ ಮಾತ್ರ ಸಾರ್ಥಕವಾಗುವುದು. ಹಾಗಲ್ಲದೆ ಅರ್ಥ ತಿಳಿಯದೇ, ವೇದಗಳನ್ನು ಎಷ್ಟು ಪಠಿಸಿದರೂ ಎಮ್ಮೆಯ ಕೂಗಿನಂತೆ ವ್ಯರ್ಥವಾಗುವುದು ಎಂಬ ಯಾಸ್ಕರ ಎಚ್ಚರದ ಮಾತು ನೆನಪಿಗೆ ತರಬೇಕು.

ಆಯಿತು. ಈಗ ವೇದಗಳು ಎಷ್ಟು ಎಂಬುದನ್ನು ತಿಳಿಯೋಣ. ವೇದಗಳು ಅನಂತವಾಗಿರುವುದು. **ಅನಂತಾವೈವೇದಾಃ ।** ಆದರೆ ಶ್ರೀವೇದವ್ಯಾಸರು ವೇದಗಳನ್ನು ವಿಂಗಡಿಸಿ ನಾಲ್ಕು ರೀತಿ ಇರುವುದಾಗಿ ತಿಳಿಸುತ್ತಾರೆ. **ಋಗ್ವೇದ, ಸಾಮವೇದ, ಯಜುರ್ವೇದ ಮತ್ತು ಅಥರ್ವಣವೇದ**ಗಳಾಗಿ ವಿಭಾಗ ಮಾಡಿದರು.

ಭಾಗವತದಲ್ಲಿ **"ಕ್ಷೀಣಾಯುಷಃ ಕ್ಷೀಣಸತ್ವಾನ್ ದುರ್ಮೇಧಾನ್ ವೀಕ್ಷ್ಯಕಾಲತಃ। ವೇದಾನ್ ಬ್ರಹ್ಮರ್ಷಯೋ ವ್ಯಸ್ಯನ್ ಹೃದಿಸ್ಥಾಪ್ಯತ ಚೋದಿತಾಃ । ಅಸ್ಮಿನ್ನಪ್ಯವಸರೇ ಬ್ರಹ್ಮನ್ ಭಗವಾನ್‌ಲೋಕಭಾವನಃ । ಬ್ರಹ್ಮೇಶಾದ್ಯೈರ್ಲೋಕಪಾಲೈರ್ಯಾಚಿತೋ ಧರ್ಮಗುಪ್ತಯೇ । ಪರಾಶರಾತ್‌ಸತ್ಯವತ್ಯಾಮಂಶಾಂಶಕಲಯಾ ವಿಭುಃ । ಅವತೀರ್ಣೋ ಮಹಾಭಾಗ ವೇದಂಚಕ್ರೆ ಚತುರ್ವಿಧಮ್ ।"** (೧೨-೬) ಅಲ್ಲದೇ **"ಬ್ರಹ್ಮಣಾಚೋದಿತೋ ವ್ಯಾಸ ವೇದಾನ್‌ವ್ಯಸ್ತುಂ ಪ್ರಚಕ್ರಮೇ । ಅಥಶಿಷ್ಯಾನ್ ಸ ಜಗ್ರಾಹ ಚತುರೋ ವೇದಪಾರಗಾನ್ । ಋಗ್ವೇದ ಗ್ರಾಹಕಲ ಪೈಲಂ ಜಗ್ರಾಹ ಮಹಾಮತಿಃ । ವೈಶಂಪಾಯನ ನಾಮಾನಂ ಯಜುರ್ವೇದಸ್ಯ ಚಾಗ್ರಹೀತ್ । ಜೈಮಿನಿಂ ಸಾಮವೇದಸ್ಯ ತದ್ವೈವಾಧ್ವರವೇದವಿತ್ । ಸುಮಂತುಃ ತಸ್ಯ ಶಿಷ್ಯೋಽಭೂತ್ ವೇದ ವ್ಯಾಸಸ್ಯಧೀಮತಿಃ ।"** ಎಂದು ವಿಷ್ಣುಪುರಾಣದಲ್ಲಿ ತಿಳಿಸಿದೆ.

ಹೀಗೆ ವೇದಗಳ ಶಾಖಾ ಪಶಾಖಗಳಾಗಿ ಯುಗಾಂತರದಿಂದ ವಿಭಿನ್ನವಾಗಿ ಕಂಡುಬರುವುದು. ಈ ವಿಷಯದಲ್ಲಿ ಶ್ರೀಮದಾನಂದತೀರ್ಥರು ಒಂದು ಮಹತ್ವಪೂರ್ಣ ವಿಷಯವನ್ನು ತಿಳಿಸಿರುತ್ತಾರೆ. ಎಲ್ಲಾ ವೇದಗಳು ಒಂದೇ ಆಗಿದ್ದಿತು ಕೃತ ಯುಗದಲ್ಲಿ. ಇಲ್ಲಿ ಶ್ರೀಹರಿಯ ಬೋಧನೆಯೇ ಮುಖ್ಯಗುರಿಯಾಗಿದ್ದಿತು. ಆಗ ಜ್ಞಾನಿಗಳು ವೇದಗಳಲ್ಲಿ ಶ್ರೀವಿಷ್ಣುವಿನ ಹಿರಿಮೆಯನ್ನು ಕಂಡು ಉಪಾಸನೆ ಮಾಡುವ ಜಾಣ್ಮೆ ಇದ್ದಿತು. ಆಗ ಮೂಲ ವೇದವೆಂದೇ ಕರೆಯಲಾಗಿದ್ದಿತು.

ಇಲ್ಲಿ ಋಗ್ವೇದದಲ್ಲಿ ೨೪ ಶಾಖೆಗಳು, ಯಜುರ್ವೇದದಲ್ಲಿ ೧೦೧ ಶಾಖೆಗಳು, ಸಾಮವೇದದಲ್ಲಿ ೧೦೦೦ ಶಾಖೆಗಳು ಹಾಗೂ ಅಥರ್ವಣವೇದದಲ್ಲಿ ೧೨ ಶಾಖೆಗಳು ಇರುವುದಾಗಿ ಉಲ್ಲೇಖಿಸಿರುತ್ತಾರೆ.

ಆದರೆ ಈಗ ಪ್ರಚಲಿತ ವಿವರಗಳಂತೆ ಋಗ್ವೇದ ೧೦ ಮಂಡಲಗಳಿಂದ ಅಥವಾ ೮ ಅಷ್ಟಕಗಳಾಗಿ ವಿಭಾಗಿಸಲ್ಪಟ್ಟಿದೆ.

ವೇದಗಳಲ್ಲಿ **ಸಂಹಿತಾ, ಬ್ರಾಹ್ಮಣ** ಮತ್ತು **ಆರಣ್ಯಕ**ಗಳೆಂದು ಮೂರು ವಿಭಾಗಗಳಿವೆ. ಎಲ್ಲಾ ವೇದಗಳಲ್ಲಿ ಮುಖ್ಯವಾಗಿ **ಋಗ್ವೇದ**ವೇ ಆಗಿರುತ್ತದೆ. ಶ್ರೀಮದಾಚಾರ್ಯರು ಈ ವೇದಕ್ಕೆ ಋಗ್ಭಾಷ್ಯವೆಂಬ ಕೃತಿ ಅತ್ಯಂತ ಮಹತ್ವವವನ್ನು ಪಡೆದಿದೆ. ಶ್ರೀಮದಾಚಾರ್ಯರು ಋಗ್ವೇದದ ೬೪ ಅಧ್ಯಾಯಗಳಲ್ಲಿನ ಮೊದಲು ಮೂರು ಅಧ್ಯಾಯಗಳಿಗೆ ಭಾಷ್ಯ ರಚಿಸಿರುತ್ತಾರೆ.

**ವಿವರಣೆ :** ೪೦ ಸೂಕ್ತಗಳಿಗೆ ೪೮೬ ಋಕ್‌ಗಳಿಗೆ ಆಚಾರ್ಯರ ವಿವರಣೆ ಕಾಣಬಹುದು. ಶ್ರೀಮದಾಚಾರ್ಯರು ವೇದಗಳ ಸಾಹಿತ್ಯ ಸಂಹಿತ ಭಾಗಕ್ಕೆ ಶ್ಲೋಕ ರೂಪ ಭಾಷ್ಯ ಇದೆ ಎಂದು ತಿಳಿಸಿ ಋಗ್ವೇದದ ಮಹತ್ವವನ್ನು ತಿಳಿಸಿರುತ್ತಾರೆ.



ಶ್ರೀಮದಾಚಾರ್ಯರು ಎಲ್ಲಾ ವೇದಗಳು ಪರಮಮುಖ್ಯವಾಗಿ ತತ್ವಶಾಸ್ತ್ರ ಬೋಧಕದ ಜೊತೆಗೆ ಕರ್ಮ ಪ್ರಕರಣವನ್ನೂ ತಿಳಿಸುತ್ತಾ ಇವೆಲ್ಲವೂ ಮೂಲತಃ ಭಗವಂತನ ವಿಷಯಕ ಜ್ಞಾನ ಪಡೆಯಲು ಸಾಧನವಾಗಿವೆ ಎಂದು ತಿಳಿಸಿ ಸಾಧಿಸಲು

**"ವೈದ್ಯೈಶ್ಚ ಸರ್ವೇರಹಮೇವ ವೇದ್ಯಃ"** (ಗೀತಾ)

**"ಸರ್ವೇವೇದಾಯತ್ಪದಮಾಮನಂತಿ"** ಇವೇ ಮೊದಲಾದ ಪ್ರಮಾಣಗಳಿಂದ ತತ್ವಜ್ಞಾನವನ್ನು ಪ್ರಕಟಿಸಿ ಹರಿಯೇ ಸಮಸ್ತ ವೇದಗಳ ಪ್ರಮುಖ ತಾತ್ಪರ್ಯವೆಂದು ತಿಳಿಸಿದ ಕೀರ್ತಿ ಶ್ರೀಮದಾಚಾರ್ಯರದ್ದು.

ಶ್ರೀಮದಾಚಾರ್ಯರು ಋಗ್ಭಾಷ್ಯದಲ್ಲಿ ತಿಳಿಸಿದ ವಿಷಯ: ವೇದಗಳಲ್ಲಿ **ಓಂಕಾರ ವ್ಯಾಹೃತಿ** ಹಾಗೂ **ಗಾಯತ್ರಿ** ಮಂತ್ರಗಳ ಅಭಿಪ್ರಾಯದ ವಿವರಣೆ ಇದೆ.

ಗಾಯತ್ರಿ ಮಂತ್ರದಲ್ಲಿ ಮೂರು ಪಾದಗಳು. ಅವುಗಳ ವಿವರಣಾತ್ಮಕ ವಿಸ್ತಾರವೇ ಪುರುಷಸೂಕ್ತದ ಮೂರು ಋಕ್‌ಗಳು. ಈ ಮೂರು ಋಕ್‌ಗಳ ವಿಸ್ತಾರವೇ ಋಗ್ವೇದವೆಂದು ತಿಳಿಸುತ್ತಾ ಗಾಯತ್ರಿ ಮಂತ್ರ ಪ್ರತಿಪಾದ್ಯನು ಶ್ರೀಮನ್ನಾರಾಯಣನು. ಅವನ ಸ್ತುತಿ ರೂಪ ಮಂತ್ರಗಳೇ ಪುರುಷಸೂಕ್ತ. ಪುರುಷಸೂಕ್ತವು ಶ್ರೀವಿಷ್ಣುವಿನನ್ನು ಹೊಗಳುತ್ತದೆ. ಪುರುಷಸೂಕ್ತದ ವಿಸ್ತಾರವೇ ವೇದಗಳು ಎಂದು. ವೇದಗಳಿಗೆ ಮೂಲ ಗಾಯತ್ರಿ ಮಂತ್ರ. **"ವೇದಮಾತಾತು ಗಾಯತ್ರೀ"** ಎಂದು ತಿಳಿಸಿಕೊಟ್ಟ ಮಹನೀಯರೇ ಶ್ರೀಮದಾಚಾರ್ಯರು.

ಹೀಗೆ ತಿಳಿಸುತ್ತಾ ಅನೇಕ ದುರ್ಬೋಧಕ ವ್ಯಾಖ್ಯಾನಕಾರರನ್ನು ತಿರಸ್ಕರಿಸುತ್ತಾರೆ. ವೇದಗಳೆಲ್ಲವೂ ತತ್ತ್ವಾವೇದಕವೇ ಆಗಿರುತ್ತೆ. ಅನ್ಯಮತೀಯರು ಹೇಳಿದಂತೆ ವೇದಗಳೆಲ್ಲಾ ತತ್ತ್ವಾವೇದಕ ಅತತ್ತ್ವಾವೇದಕವೆಂದು ಇರುವುದು ಎನ್ನುವುದನ್ನು ಖಂಡಿಸಿ ಎಲ್ಲಿಯೂ ವೇದಗಳಲ್ಲಿ ಅತತ್ತ್ವಾವೇದಕ ಭಾಗವಿರುವುದೆಂದು ಹೇಳಿಯೇ ಇಲ್ಲ ಎಂದು ಅವರ ಮತವು ಗ್ರಾಹ್ಯವಲ್ಲವೆಂದು ಘಂಟಾಘೋಷದಿಂದ, ಧೈರ್ಯದಿಂದ ಸಾಧಿಸಿದವರು ಶ್ರೀಮದಾಚಾರ್ಯರೇ ಎಂಬುದನ್ನು ತಿಳಿಯಬೇಕು.

**ಆಕ್ಷೇಪ :** ಶ್ರೀಮದಾನಂದತೀರ್ಥರು ಋಗ್ವೇದದಲ್ಲಿ ಮೊದಲು ಮೂರು ಅಧ್ಯಾಯಗಳಷ್ಟೇ ಏಕೆ ಬರೆದರು ?

**ಸಮಾಧಾನ :** ಈ ಶಂಕಾ ಪರಿಹಾರ ಮಾಡುತ್ತಾ ಶ್ರೀಮದಾನಂದತೀರ್ಥರು ಹೀಗೆ ತಿಳಿಸಿ ಸಮಾಧಾನ ರೂಪ ಶಂಕಾ ಪರಿಹಾರ ಮಾಡಿರುತ್ತಾರೆ.

**"ಅನ್ಯೇನ ಮಾರ್ಗೇಣೋತ್ತರಸ್ಯಾಪಿ ಮಂತ್ರ ಜಾತಸ್ಯ ವ್ಯಾಖ್ಯಾನಂ ।**
**ಸಿದ್ಧಮೇ ವಾತ ಉಪರಮ್ಯತ ಇತಿಹಿಶಬ್ದೇನಾಚಷ್ಟೇಭಗವಾನ್ ಮುನಿಃ ॥**

**ವಿವರಣೆ :** ಶ್ರೀಮದಾಚಾರ್ಯರು ಇಷ್ಟು ಬರೆದುದರಿಂದ ಬಾಕಿ ಮುಂದಿನ ವೇದಭಾಗಕ್ಕೆ ಅರ್ಥಮಾಡಿಕೊಳ್ಳಲು ಸಾಕಷ್ಟು ಮಾರ್ಗದರ್ಶನವಾಗುವುದೆಂದು ತಿಳಿಸಿದ್ದಾರೆ.

ಆದ್ದರಿಂದ ಬಾಕೀ ವೇದಭಾಗಕ್ಕೆ ಭಾಷ್ಯ ರಚಿಸಿಲ್ಲವೆಂದಿದ್ದಾರೆ.

"ನಾವು ಋಗ್ವೇದದ ಮೊದಲು ಮೂರು ಅಧ್ಯಾಯಗಳಿಗಷ್ಟೇ ಭಾಷ್ಯ ಬರೆದಿದ್ದೇವೆ. ಜಿಜ್ಞಾಸುಗಳ ಇದರ ಆಧಾರದಿಂದ ವೇದದ ಬಾಕೀ ಅರ್ಥವನ್ನು ತಿಳಿದುಕೊಳ್ಳಲು ಸಹಕಾರಿ ಆಗಲಿ" ಎಂದು ಹೇಳಿದ್ದಾರೆ.

ಚೀನಾ ದೇಶದಲ್ಲಿ ಅತಿ ಪ್ರಾಚೀನ ದಾರ್ಶನಿಕ "ಕನ್ಫೂಶಿಯಸ್" (Confucious) ಎಂಬಾತನು ತನ್ನ ಶಿಷ್ಯರಿಗೆ ಹೀಗೆ ಹೇಳುತ್ತಾನೆ. I show one corner of wisdom and if you do not follow and understand the three other corners then you are unfit to be my followers. ಎಂದಿದ್ದಾನೆ. ಹಾಗೇನೇ ಶ್ರೀಮದಾಚಾರ್ಯರು ಋಗ್ವೇದದ ಮೂರು ಅಧ್ಯಾಯಗಳಿಗೆ ಭಾಷ್ಯ ಬರೆದಿದ್ದೇನೆ. ಇನ್ನು ಇದರ ಬಾಕೀ ಅರ್ಥವನ್ನು ಮಾಡಿಕೊಳ್ಳಬೇಕು ಎಂದು ಮಾರ್ಮಿಕವಾಗಿ ತಿಳಿಸಿರುತ್ತಾರೆ.

ಕೆಲವರು ವೇದಗಳಲ್ಲಿ ಅಗ್ನಿ, ಇಂದ್ರ ವಸು ಇತ್ಯಾದಿ ದೇವತೆಗಳ ಸ್ತುತಿ ಇರುವುದು ಎಂದಿದ್ದಾರೆ. ಅವರೆಲ್ಲರೂ ಪ್ರತಿಪಾದ್ಯರೇ ಆದರೆ ಪರಮ ಮುಖ್ಯ ವೃತ್ತಿಯಿಂದ ಶ್ರೀಮನ್ನರಾಯಣನೇ ಪ್ರತಿಪಾದ್ಯನಾಗಿರುತ್ತಾನೆ ಎಂದು ತಿಳಿಸುತ್ತಾ ತಾರತಮ್ಯಾನುಸಾರ ಶ್ರೀಹರಿಯ ನಂತರ ಅಲ್ಲಲ್ಲಿ ಸ್ತುತ್ಯರಾಗಿದ್ದಾರೆ. ಇಲ್ಲಿ ಇಂದ್ರ, ಅಗ್ನಿ, ವಾಯುದೇವತೆಗಳ ಸೂಕ್ತಗಳಿದ್ದರೂ ಆಯಾ ಶಬ್ದವಾಚ್ಯನು ಆ ದೇವತೆಗಳ ಅಂತರ್ಯಾಮಿ ಶ್ರೀವಿಷ್ಣುವೇ ಮುಖ್ಯವಾಗಿ ಪ್ರತಿಪಾದ್ಯನಾಗಿರುತ್ತಾನೆ ಎಂದು ತಿಳಿಸಿರುತ್ತಾರೆ. ಇಷ್ಟು ತಿಳಿಸಿ ವೇದಗಳ ಅಧ್ಯಯನ ಪೂರ್ವದಲ್ಲಿ **ಋಷಿ ದೇವತಾ ಛಂದಸ್ಸ**ನ್ನು ತಿಳಿಯಬೇಕು.

ಇಂತಹ ಪರಜ್ಞಾನವಿರಬೇಕು. ಇಲ್ಲವಾದರೆ ನಮಗೆ ಸದ್ಗತಿ ಫಲವನ್ನು ಕೊಡುವ ಬದಲು ಅನರ್ಥವೇ ಆಗುವುದೆಂದು ವೇದಗಳಲ್ಲಿ ತಿಳಿಸಿರುವುದನ್ನು ನೆನಪಿಗೆ ತಂದುಕೊಳ್ಳಬೇಕು.

ವೇದಗಳು ಅನಾದಿ ನಿತ್ಯತ್ವವು. ಇಂತಹ ವೇದಗಳಲ್ಲಿ ಶ್ರೀವಿಷ್ಣುವೇ ಪರಮ ಮುಖ್ಯ ಪ್ರತಿಪಾದ್ಯ ದೇವತೆ. ವೇದಗಳು ದೋಷರಹಿತವು ಅಂದ ಮೇಲೆ ನಿರ್ದೋಷನಾದ ಪರಮಾತ್ಮನೇ ಅವುಗಳ ಪ್ರಧಾನ ದೇವತೆ.

ಋಗ್ವೇದಕ್ಕೆ ಇಂದ್ರನು, ಯಜುರ್ವೇದಕ್ಕೆ ಸೂರ್ಯನು, ಸಾಮವೇದಕ್ಕೆ ಸೋಮನು ಇವರು ಮೂರನೇ ಕಕ್ಷದಲ್ಲಿ ಋಷಿಗಳು. ಶ್ರೀಹರಿ, ಬ್ರಹ್ಮ, ವಾಯುದೇವರು, ಗರುಡರು ಅವರವರ ಪತ್ನಿಯರು ಕ್ರಮವಾಗಿ ಮಹಾಲಕ್ಷ್ಮೀ, ಸರಸ್ವತೀ, ಭಾರತೀಯರು, ವಾರುಣೀಯರು ಋಷಿಗಳಾಗಿರುತ್ತಾರೆಂಬ ಜ್ಞಾನವಿದ್ದಾಗ ಅತಿಶಯವಾದ ಫಲ ಲಭಿಸುವುದೆಂದು ಶ್ರೀಮದಾಚಾರ್ಯರು ತಿಳಿಸಿರುತ್ತಾರೆ.

ವೇದಗಳನ್ನು ಯಾರೂ ಬರೆದಿದ್ದಲ್ಲ. **ಸ್ಮೃತಿ**ಗಳಿಂದೆನಿಸಿದವು. ಕೃತಯುಗದಲ್ಲಿ ಋಷಿಮುನಿಗಳು ವೇದಗಳನ್ನು ಅರ್ಥಮಾಡಿಕೊಂಡು ಅದರಲ್ಲಿ ಭಗವಂತನ ಮಹಿಮೆ ವರ್ಣಿತವಾಗಿದೆ ಎಂದು ಉಪಾಸನೆ ಮಾಡುತ್ತಿದ್ದರು. ಮೂರ್ತಿ ಪೂಜೆ ಇದ್ದಿಲ್ಲ.



ಕಾಲಕ್ರಮೇಣ ಮನುಷ್ಯರ ಜ್ಞಾಪಕಶಕ್ತಿ ಕುಗ್ಗುತ್ತಾ ಬಂದಿತು.

**ಭಗವನ್ನಾರಾಯಣೋ ಬ್ರಹ್ಮರುದ್ರೇಂದಿಭಿಃ ಅರ್ಥಿತೋ ವ್ಯಾಸತ್ವೇನ ಅವತತಾರ।**
**ತಜ್ಞಾನಪನಾರ್ಥಂ ವೇದಮುತ್ಸನ್ನಂ ವ್ಯಂಜಯನ್ ಚತುರ್ಥಾವ್ಯಭಿಜಿತ್ ಚತುರ್ವಿಂಶತಿದ್ವೈಕಶತಥಾ ಸಹಸ್ರಥಾ ದ್ವಾದಶಥಾ ಚ ।**

**ವಿವರಣೆ** : ಬ್ರಹ್ಮರುದ್ರಾದಿ ದೇವತೆಗಳು ಶರಣ್ಯನಾದ ಶ್ರೀನಾರಾಯಣನಲ್ಲಿ ಪ್ರಾರ್ಥಿಸಿದರು. ಹೀಗೆ ಪ್ರಾರ್ಥಿತನಾದ ಭಗವಂತ ವ್ಯಾಸದೇವನಾಗಿ ಅವತಾರ ಮಾಡಿದರು. ವೇದಗಳನ್ನು ಚೆನ್ನಾಗಿ ತಿಳಿಸಿಕೊಡುವ ಉದ್ದೇಶದಿಂದ ೪ ಭಾಗಗಳನ್ನಾಗಿ ಪುನಃ ನೂರು ಭಾಗಗಳನ್ನಾಗಿ ಮತ್ತೂ ಸಹಸ್ರವಾಗಿಯೂ ಕೊನೆಗೆ ೧೨ ಭಾಗಗಳನ್ನಾಗಿ ವಿಭಾಗ ಮಾಡಿದರು.

ಆದರೂ ತ್ರೇತಾಯುಗದಲ್ಲಿ **"ಜ್ಞಾನಂ ಕಿಂಚಿತ್ತದನ್ಯಥಾ ಜಾತಂ ತ್ರೇತಾಯಾಂ ದ್ವಾಪರೆ ಅಖಿಲಂ"**

ದ್ವಾಪರ ಯುಗದಲ್ಲಿ ವೇದಗಳ ಅರ್ಥವು ಪೂರ್ತಿಯಾಗಿ ತಿರೋಹಿತವಾಯಿತು. ಅಂದರೆ ವೇದಗಳನ್ನು ಮನಬಂದಂತೆ ಅರ್ಥೈಸಲ್ಪಟ್ಟಿತು ಎಂದು ಸ್ಕಾಂದಪುರಾಣದಲ್ಲಿ ತಿಳಿಸಲಾಗಿದೆ. ಹೀಗೆ ವೇದಗಳು ಅನಾದಿ ಹಾಗೂ ನಿತ್ಯವಲ್ಲದೇ ಅಪೌರುಷೇಯವೇ ಎಂದು ಜಗತ್ಪ್ರಸಿದ್ಧವಾಗಿದೆ.

ವೇದ ಅಂದರೇನು ತಿಳಿಯೋಣ. Vid = To know Veda = Knowledge A sacred sculpture of Hindus (world) Max Mueller ಎಂಬ ಜರ್ಮನಿಯ ವಿದ್ವಾಂಸ ವೇದಗಳನ್ನು ಆಶವಾಗಿ ಓದಿ "The Sacred Books of India" ಎಂಬ ೭ ಸಂಪುಟಗಳಲ್ಲಿ ಬರೆದಿದ್ದಾನೆ. ಅವನು ಅರ್ಥ ಮಾಡಿರುವುದು ಹೇಗೇ ಇರಲಿ ವೇದಗಳು ಜಗತ್ಪ್ರಸಿದ್ಧ ಎನ್ನುವುದು ಖಚಿತ.

ಶ್ರೀವೇದವ್ಯಾಸರು ವೇದಗಳು ಅನಂತವಾಗದ್ದವು ಎಂದು ಅವುಗಳನ್ನು scientific ಆಗಿ ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದರು. ಋಗ್‌ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ ಎಂದು.

**"ವಿದುರ್ಲ್‌ಗತ್ಯವಸಧಾನೇ"** ಎಂಬ ನಿರುಕ್ತಿಯಿಂದ **ಗತಿ** = ಜ್ಞಾನವನ್ನು ಪಡೆಯುವುದು ಎಂಬರ್ಥ. ವೇದ ಎಂದರೆ ನಾರಾಯಣ ಪರಮಾತ್ಮ **"ಶಾಸ್ತ್ರಾಣಿ ವಿಂದಂತಿ ಪ್ರಾಪ್ನುವಂತಿ ಅಸ್ಮಿನ್"** ಎಂದಿದೆ.

**ಸಂಕರ್ಷಣತ್ವೇ ಶಾಸ್ತ್ರಾರ್ಥ ಪ್ರದತ್ವಾತ್ ವೇದ ಈರಿತಃ** (ನಿರುಕ್ತಿ)

ಶೃತಿ, ಧರ್ಮ ಬ್ರಹ್ಮಜ್ಞಾನ ಬೋಧಕವಾದ ಅಪಾರುಷೇಯ ವಾಕ್ಯರಾಶಿ **"ವಿದ್ಯಂತನೇನ ಧರ್ಮಂವಿದ್ (ಜ್ಞಾನೇ)"**

ಹೀಗೆ ಯುಗಾಂತರದಲ್ಲಿ ಮರೆಯಾಗಿದ್ದ ಗೋಚರವಾಗದೇ ಇದ್ದ ವೇದಗಳನ್ನು ಬ್ರಹ್ಮದೇವರ ಆಜ್ಞಾನುಸಾರ ಅನುಮತಿ ಪಡೆದು ಮಹಾಋಷಿಗಳು ಸಾಕ್ಷಾತ್ಕರಿಸಿಕೊಂಡರು. **"ಮಹರ್ಷಯಃ ಲೇಭಿರೇತಪಸಾ ಪೂರ್ವಮನುಜ್ಞಾತಾಃ ಸ್ವಯಂಭುವಾ"।**

ಮುಂದೆ ಜಗತ್ತಿನಲ್ಲಿ ಮನುಷ್ಯರು ಅಲ್ಪಾಯುಷ್ಯ ಉಳ್ಳವರೆಂದು ಗ್ರಹಿಸಿ ವೇದಗಳನ್ನು ಪುನಃ ವಿಭಾಗ ಮಾಡಿದರು. ವೇದಗಳು ನಾಲ್ಕು ಆಯಿತು. ಶ್ರೀವೇದವ್ಯಾಸದೇವರು ನಾಲ್ಕು ವೇದಗಳನ್ನು ತಮ್ಮ ಶಿಷ್ಯರಾದ **(೧) ಪೈಲರಿಗೆ ಋಗ್ವೇದವನ್ನು (೨) ವೈಶಂಪಾಯನಿಯರಿಗೆ ಯಜುರ್ವೇದವನ್ನು (೩) ಜೈಮಿನೀಗಳಿಗೆ ಸಾಮ ವೇದವನ್ನು (೪) ಸುಮಂತು ಇವರಿಗೆ ಅಥರ್ವವೇದವನ್ನು** ಉಪದೇಶಿಸಿದರು. ಇವರೆಲ್ಲಾ ವೇದ ಮಂತ್ರ ದ್ರಷ್ಟಾರರು ಎಂಬುದಾಗಿ ತಿಳಿಯುವಂತೆ ಆಯಿತು.

ಹೀಗೆ ಪರಂಪರಾಗತವಾಗಿ ಅವರ ಶಿಷ್ಯ ಪ್ರಶಿಷ್ಯರಿಗೆ ಬೋಧಿಸಿದ್ದರಿಂದ ವೇದಗಳನ್ನು ಇಂದಿಗೂ ಶಾಶ್ವತವಾಗಿ ಸ್ಥಿರವಾಗಿ ನಿಲ್ಲುವಂತಾಯಿತು. ಈ ರೀತಿ ಪ್ರಾಪ್ತವಾದ ವೇದವು ಶ್ರೋತ್ರಕ್ಕೆ ಮಾತ್ರ ವಿಷಯವಾದುದರಿಂದ ಇದನ್ನು ಶೃತಿ ಎಂದು ವ್ಯವಹಾರವಿದೆ.

**ಬ್ರಹ್ಮಣಾ ಚೋದಿತೋ ವ್ಯಾಸಃ ವೇದಾನ್ ವ್ಯಸ್ತ್ಯ ಪ್ರಚಕ್ರಮೇ ।**
**ಅಥಶಿಷ್ಯಾನ್ ಚ ಜಗ್ರಾಹ ಚತುರೋ ವೇದ ಪಾರಿಗಾನ್ ।**
**ಋಗ್ವೇದ ಗ್ರಾಹಕಂ ಪೈಲಂ ಜಗ್ರಾಃ ಮಹಾಮತಿಃ ।**
**ವೈಶಂಪಾಯನನಾಮಾನಂ ಯಜುರ್ವೇದಸ್ಯ ಚಾಗ್ರಹೀತ್ ।**
**ಜೈಮಿನಿಂ ಸಾಮವೇದಸ್ಯ ತಥೈ ವಾಧ್ವರ ವೇದವಿತ್ ।**
**ಸುಸುಮಂತುಃ ತಸ್ಯ ಶಿಷ್ಯೋಽಭೂತ್ ವೇದವ್ಯಾಸಸ್ಯ ಧೀಮತಃ ॥**

ಎಂದು ವಿಷ್ಣುಪುರಾಣದಲ್ಲಿ ತಿಳಿಸಲಾಗಿದೆ.

ಆದರೆ ಸಮಸ್ತ ವೇದಗಳು ಒಂದೇ ಅರ್ಥಗಳನ್ನು ಕೊಡುವುದಾದರೂ ಶಾಖಾಭೇಧದಿಂದ ಬೇರೆ ಬೇರೆ ಆಗಿರುತ್ತದೆ.

ವೇದಗಳನ್ನು ಕಲಿಯುಗದಲ್ಲಿ ಕಂಠಸ್ಥವಾಗದೇ ಇದ್ದಾಗ ಮಹಾಋಷಿಗಳಿಗೂ ಲಿಖಿತ ಮೂಲಕ ಗ್ರಂಥಗಳಾಗಿ ಬಂದಿವೆ. ಹಾಗೆಂದ ಮಾತ್ರಕ್ಕೆ ವೇದಗಳನ್ನು ಅವರು ಬರೆದವರಲ್ಲ ಎಂದು ತಿಳಿಯಬೇಕು. ವೇದಗಳು ಅನಾದಿ ಅಂದರೆ ಯಾವಾಗ ಹುಟ್ಟಿದವು. ಆರಂಭ ಯಾವಾಗ ಆಯಿತು ಎಂದು ಹೇಳಲೂ ಬರುವುದಿಲ್ಲ. ಏಕೆ ಅಂದರೆ ಅವು ಆದಿಯೇ ಇಲ್ಲದ್ದು – ಅನಾದಿ. ಹಾಗೇ ಅವು ಅನಾದಿ ಹೇಗೋ ಅಷ್ಟೇ ನಿತ್ಯ ಶಾಶ್ವತ. ಅವುಗಳಿಗೆ ಅಂತ್ಯವೇ ಇರುವುದಿಲ್ಲ.

**ಇತರ ಮತೀಯ ಸಿದ್ಧಾಂತಗಳು :** ಅವರ ಗ್ರಂಥಗಳು ಅಪೌರುಷೇಯವಲ್ಲ. ಆದರೆ ಇತರ ಮತಗಳಾದ (ಲೋಕದಲ್ಲಿ) ಕ್ರೈಸ್ತ, ಪಾರ್ಸಿ, ಇಸ್ರೇಲ್ (ಯಹೂದಿ)



ಮುಸ್ಲಿಂಗಳ ಸಿದ್ಧಾಂತವನ್ನು ತಿಳಿಸುವ ಗ್ರಂಥಗಳು ಅಪೌರುಷೇಯವಾಗಿರದೆ ಅವುಗಳಿಗೆ ಆದಿ (Beginning) ಇರುವುದು. ಅವುಗಳ ಪ್ರವರ್ತಕನು(ರು) ಯಾರು ಅನ್ನುವುದನ್ನು ತಿಳಿಸುವುದಿಲ್ಲ.

ಆ ಮತಗಳ ಗ್ರಂಥಗಳು ಹೇಗೆ ಅಪೌರುಷೇಯವಾಗುವುದಿಲ್ಲವೆನ್ನುವುದನ್ನು ಸೂಕ್ಷ್ಮವಾಗಿ (Brief cursery glance) ತಿಳಿಸುವ ಪ್ರಯತ್ನವಷ್ಟೆ.

**ವಿಶೇಷಾಂಶ :** ಇತರ ಮತಗಳಾದ ಕ್ರಿಸ್ತ, ಮುಸಲ್ಮಾನ್ ಜೊರಾಷ್ಟ್ರ (ಪಾರ್ಸಿ) ಆದಿಗಳ ಬಗ್ಗೆ ನಾವೇಕೆ ತಿಳಿಯಬೇಕು ಮತ್ತು ಅವುಗಳನ್ನೇಕೆ ವಿಮರ್ಶಿಸಬೇಕು ? ನಮ್ಮ ಸಿದ್ಧಾಂತವೇನೆಂದು ತಿಳಿದರಾಯಿತು ಎಂಬ ಆಕ್ಷೇಪ ಈಗಿನ ಪೀಳಿಗೆಯವರು ಎತ್ತುತ್ತಾರೆ. ಅದಕ್ಕೆ ಸಮಾಧಾನ ಹೀಗಿರುತ್ತೆ.

ನಮ್ಮ ಸಿದ್ಧಾಂತ ತಿಳಿಯಬೇಕು ನಿಜ. ಆದರೆ ನಮ್ಮ ವೈದಿಕ ತತ್ವಜ್ಞಾನ ದೃಢವಾಗಬೇಕು. ಅದೂ ಸರಿ ಇದೂ ಸರಿ ಎಂಬುದು ಯುಕ್ತವಲ್ಲ. ಇದೇ ಸರಿ ಅಂತ ಖಚಿತವಾಗಬೇಕಾದರೆ ನಮ್ಮ ಮತ ಸಿದ್ಧಾಂತ ಸಯುಕ್ತಿಕವಾಗಿ ಭಗವಂತನ ಪ್ರಸಾದ ಪಡೆಯಬೇಕು. ಇತರ ಮತಗಳಲ್ಲಿ ಇಂತಹ ಬೋಧನೆ ಮಾರ್ಗದರ್ಶನ ಕಾಣಲಾಗದು ಎಂದು ತಿಳಿಸಲು ಆ ಮತಗಳು ಎಷ್ಟು ಪೊಳ್ಳು, ಅಪ್ರಮಾಣ ಬುಡರಹಿತವೆನ್ನುವುದನ್ನು ನಾವು ಸ್ವಲ್ಪ ಮಟ್ಟಿಗೆ ತಿಳಿದಿರಬೇಕು. ಅವುಗಳು ಅಪಸಿದ್ಧಾಂತ, ದುಷ್ಟವೆಂಬುದನ್ನು ತಿಳಿದಾಗ ಮಾತ್ರ ನಮ್ಮ ಸಿದ್ಧಾಂತವೇ ನಿಜ ಮಾರ್ಗವೆಂಬುದು ಸ್ಥಿರವಾಗಬೇಕು.

ಶ್ರೀಮದಾಚಾರ್ಯರು ಶ್ರೀಟೀಕಾಕೃತ್ಪಾದರು ಅವರ ಪೂರ್ವದಲ್ಲಿ ಪ್ರಚಲಿತವಾದ ಚಾರವಾಕ, ಬೌದ್ಧ, ಜೈನ, ಅದ್ವೈತ, ವಿಶಿಷ್ಟಾದ್ವೈತ, ಶಾಕ್ತ, ಶಕ್ತಿ ವಿಶಿಷ್ಟಾದ್ವೈತ ಮತಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಅವುಗಳಲ್ಲಿ ಯಥಾರ್ಥ ಬೋಧಕ ತತ್ವವಾದವು ಇಲ್ಲವೆಂದು ಗ್ರಹಿಸಿ ತಮ್ಮ ಕೃತಿಗಳಾದ ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನ ಖಂಡನ ತ್ರಯಗಳು ಆದಿಗಳಲ್ಲಿ ತಿಳಿಸಿ ದ್ವೈತವೇ ವೇದೇತಿಹಾಸ ಪುರಾಣಗಳಲ್ಲಿ ಸುಸ್ಪಷ್ಟವಾಗಿ ಹರಿಸರ್ವೋತ್ತಮತ್ವ ವಾಯುಜೀವೋತ್ತಮತ್ವ, ಪಂಚಭೇದ, ತಾರತಮ್ಯ, ಜೀವೇಶ್ವರ ಭೇದವಿರುವುದಾಗಿ ಘಂಟಾಘೋಷವಾಗಿ ನಿರೂಪಿಸಲು ಸಾಧ್ಯವಾಯಿತು.

ಹಾಗಲ್ಲದೇ ಶ್ರೀಮದಾಚಾರ್ಯರೇ ಆದಿಯಾಗಿ ದ್ವೈತಸಿದ್ಧಾಂತವನ್ನು dictate ಮಾಡಿಲ್ಲ. ತಾವು ಜಿಜ್ಞಾಸಾ ಮಾಡಿ ನೀವು ಜಿಜ್ಞಾಸಾ ಮಾಡಿರಿ.

**ಆರೋಡ್ಯಸರ್ವಶಾಸ್ತ್ರಾಣಿ ವಿಚಾರ್ಯಚ**
**ಪುನಃಪುನಃ ಇದಮೇವ ಸುವಿಷ್ಪನ್ನಂಯ್ ।**
**ಧ್ಯೇಯೋ ನಾರಾಯಣಸ್ಸದಾ ವೇದಶಾಸ್ತ್ರಾತ್**
**ಪರಂ ನಾಸ್ತಿ ನದೇವೋ ಕೇಶವಾತ್ಪರಂ ॥**

ಹೀಗಾಗಿ ಅನ್ಯಮತಗಳನ್ನು ತಕ್ಕಮಟ್ಟಿಗೆ ವಿಮರ್ಶಾತ್ಮಕ ದೃಷ್ಟಿಯಿಂದ ಸಾರಭೂತ ಮಾತ್ರ ಬರೆದು ವಾಚಕರು ತಿಳಿಯಲಿ ಎಂಬ ಅಂಶದಿಂದ ಬರೆಯಲಾಗಿದೆ.

ಶ್ರೀಮಜ್ಜಯತೀರ್ಥರು ಸೌರಾಷ್ಟ್ರಕ್ಕೆ ಹೋಗಿ ಅಲ್ಲಿ ಬೌದ್ಧ ರಾಜನು ಇವರ ಪಾಂಡಿತ್ಯಕ್ಕೆ ತಲೆಬಾಗಿ ತನ್ನಲ್ಲಿರುವ ಗ್ರಂಥಗಳ ಭಂಡಾರವನ್ನು ಅವಲೋಕನ ಮಾಡುವಂತೆ ಹೇಳಿದನೆಂದೂ ಜಯತೀರ್ಥರು ಒಂದು ವರ್ಷ ಅಲ್ಲೇ ಇದ್ದು ಗ್ರಂಥಾವಲೋಕನ ಮಾಡಿ ಒಂದು ವಿಮರ್ಶಾತ್ಮಕ ದೃಷ್ಟಿಯಿಂದ ಟಿಪ್ಪಣಿ ಮಾಡಿಕೊಂಡರೆಂದು ಅವರ ಜೀವನ ಚರಿತ್ರೆಯಲ್ಲಿ ಉಲ್ಲೇಖ ಇದೆ. ಇದರಿಂದಾಗಿ ಶ್ರೀಮನ್ನ್ಯಾಯಸುಧಾದಲ್ಲಿ ಪಂಚಾಖ್ಯಾತಿವಾದವೆಂಬ ಅಂಶವನ್ನು ನಾವು ಕಾಣುತ್ತೇವೆ.

ಆದ್ದರಿಂದ ಈ (critique) ವಿಮರ್ಶಾತ್ಮಕ ವಿವರಣೆ ಬರೆಯಲಾಗಿದೆ. ಆ ಮತಗಳಲ್ಲಿನ ಕೆಲ ಸೂಕ್ಷ್ಮಾಂಶಗಳನ್ನು ತಿಳಿಸಲಾಗಿದೆಯೇ ವಿನಃ ಕೇವಲ criticise ಮಾಡಬೇಕೆಂಬ ದೃಷ್ಟಿ ಇಲ್ಲ.

**ಕ್ರಿಸ್ತ ಮತ ಸಾರ :** ಜೀಸಸ್ ಕ್ರಿಸ್ತನು ಜನಿಸಿದ. ನಿಖರವಾಗಿ ವರ್ಷದ ಬಗ್ಗೆ ಎಲ್ಲಿಯೂ ಹೇಳಿಲ್ಲ. ಆದರೆ A.D. ವರ್ಷ ಆರಂಭವಾದದ್ದು 1 A.D. ಅಂತ ನಂಬಿಕೆ. ಇದನ್ನು Gregarian Calendar ಅಂತ ಇವತ್ತಿಗೂ ಅನುಸರಿಸಲಾಗಿದೆ. A.D. ಅಂದರೆ Anno Domino ಅಂತ Latin ನಲ್ಲಿ ಕರೆಯಲಾಗಿದೆ. ಆದರೆ ಕೆಲವರು A.D. ಯನ್ನು After the Death ಅಂತ ಕರೆಯುತ್ತಾರೆ. ಇರಲಿ.

ಜೀಸಸ್ ಹುಟ್ಟಿದ್ದು Jerusalem Bethleham ಎಂಬ ನಗರದಲ್ಲಿ (Israel). ತಂದೆ ಜೋಸೆಫ್. ಒಬ್ಬ ಬಡಿಗೆ (Carpenter). ತಾಯಿ ಮೇರಿ ಒಂದು ಧನಗಳನ್ನು ಕಟ್ಟುವ ಜಾಗದಲ್ಲಿ ಗಂಡು ಮಗುವನ್ನು ಪ್ರಸವಿಸಿದಳು.

ಮಗು ಜನಿಸಿದ್ದು ಏಪ್ರಿಲ್ ತಿಂಗಳಲ್ಲ. ಆದರೆ ಈತನು ಜನಿಸಿದ್ದು ಕ್ರಿಸ್‌ಮಸ್ ಅಂತ ಡಿಸೆಂಬರ್ ೨೫ ರಂದು ಆಚರಿಸುತ್ತಾರೆ. ಕಾರಣ ಡಿಸೆಂಬರ್ ತಿಂಗಳು ಇಸ್ರೇಲ್‌ನಲ್ಲಿ ನಡುರಾತ್ರಿ ತುಂಬಾ ಛಳಿ. ಆ ದಿನವನ್ನು ಯಹೂದಿಗಳು Yool Tyde Festival ಅಂತ ಇವತ್ತಿಗೂ ಕರೆಯುತ್ತಾರೆ. ಮುಂದೆ ಕ್ರಿಶ್ಚಿಯನ್ನರು ನಿಜವಾದ ಜನನದ ದಿನಾಂಕ ತಿಳಿಯದೇ ಡಿಸೆಂಬರ್ ೨೫ ರನ್ನು ಜನನ ದಿನವೆಂದು ಆಚರಿಸುತ್ತಾರೆ.

ಇವನೆ ಮುಂದೆ Jesus Christ ಅಂತ ಕರೆಯಲಾಯಿತು. ತಂದೆ ಜೀಸಸ್ ಸಣ್ಣವನಾಗಿದ್ದಾಗ ತೀರಿಕೊಂಡ.

ಜೀಸಸ್‌ನ ಬಾಲ್ಯ ಜೀವನದ ಬಗ್ಗೆ ಎಲ್ಲಿಯೂ ಲೇಖನ. ಶಾಸನ ಕೃತಿಗಳು ಇರುವುದಿಲ್ಲ. ಜೀಸಸ್ ೨೫ ವರ್ಷದವನಾದಾಗ ಹೆಸರು ಪಡೆದು ಖ್ಯಾತಿ ಹೊಂದಿದ.

ಇಷ್ಟೆಲ್ಲಾ ಅನ್ಯಮತೀಯರ ಬಗ್ಗೆ ಏಕೆ ಬರೆಯಲಾಗಿದೆ ಅಂದರೆ ಎರಡು ವಿಷಯ ತಿಳಿಸಲು ಪ್ರಯತ್ನ.



೧. ಭಾರತದಲ್ಲಿ ವೇದಗಳು ಅತೀವ ಪುರಾತನ, ಆದಿರಹಿತ, ಹಾಗೇನೇ ಅಂತ್ಯವು ಇರದೆ ಅಪೌರುಷೇಯ ಗ್ರಂಥ ರಾಶಿ. ಇಂದಿಗೂ ವೇದವಾಕ್ಯಗಳು ಯಥಾವತ್ತಾಗಿ ಪಠಣ, ಪ್ರವಚನ ನಡೆಯುತ್ತದೆ. **''ಅನಾಕುಲಂ ಗೋಕುಲ ಮುಲ್ಲಲಾಸ''** ಎಂದು ಸುಮಧ್ವವಿಜಯದಲ್ಲಿ ಕಾಣಬಹುದು.

೨. ಆದರೆ ಅನ್ಯಮತಗಳಿಗೆ ಆದಿ ಪ್ರಾರಂಭದ ಬಗ್ಗೆ ಸಾಕಷ್ಟು ಕೃತಿಗಳಿವೆ. ಅಲ್ಲದೇ ಅವು ಪುರುಷಕೃತ ಗ್ರಂಥಗಳು ನಿತ್ಯವಿರಬಹುದು. ಆದರೆ ಸಾಕಷ್ಟು ಪ್ರಕ್ಷಿಪ್ತ ಸೇರ್ಪಡೆಗಳು ಇರುವುದು.

ವೇದ, ರಾಮಾಯಣ, ಭಾರತ ಗ್ರಂಥಗಳು ಪ್ರಸಿದ್ಧವಾದಾಗ ಪಾಶ್ಚಾತ್ಯ ದೇಶಗಳು ಇನ್ನು ಭೂಗರ್ಭದಲ್ಲಿ ಇದ್ದವು. ಅಲ್ಲಲ್ಲಿ ಕೆಲ ಜನಾಂಗ ಕಾಡು, ಅನಾಗರಿಕ Aboriginals ಸಂಸ್ಕಾರ, ಸಂಸ್ಕೃತಿ ಇಲ್ಲದವರಾಗಿದ್ದರೆಂದು ಐತಿಹಾಸಿಕ ಪುಟಗಳಿಂದ ತಿಳಿದುಬರುತ್ತದೆ. ಆದ್ದರಿಂದ ಭಾರತದಲ್ಲಿ ಸಂಸ್ಕೃತಿ, ನೀತಿ ಸಂಸ್ಕಾರಗಳು ಅತಿ ಪ್ರಾಚೀನವೆಂದು ಸಿದ್ಧವಾಗುವುದು.

ಒಟ್ಟು ತಾತ್ಪರ್ಯ ವೇದಗಳು ಭಗವಂತನ ಮುಖಕಮಲದಿಂದ ಹೊರಟವು. ವೇದಗಳಲ್ಲಿ ಮುಖ್ಯವಾಗಿ ಶ್ರೀಮನ್ನಾರಾಯಣನೇ ಪ್ರತಿಪಾದ್ಯನೆಂದೂ ತಿಳಿಸಲಾಗಿದೆ. **''ಶಬ್ದರಾಶಿ''** = ವೇದಗಳೇ. ಹಾಗೆ ಭಗವಂತನ ಸೃಷ್ಟಿ ಯಾವಾಗ ಆಯಿತೆಂದು ಹೇಳಲು ಬರುವುದಿಲ್ಲ ಹೇಗೋ ಹಾಗೇ ವೇದಗಳೂ ಸಹ ಆದಿ ಅಂತ್ಯರಹಿತವೆಂದು, ಅಪೌರುಷೇಯಗಳೆಂದು ಸಿದ್ಧವಾಯಿತು.

**ಆಕ್ಷೇಪ :** ವೇದಗಳು ಅಪೌರುಷೇಯವು, ಯಾರಿಂದಲೂ ಬರೆದಿಲ್ಲ ಅಂತ ಏನು ಹೇಳುತ್ತೀರಿ ? ಅದು ನಂಬಲು ಬರುವುದಿಲ್ಲ. ಏಕೆಂದರೆ ಒಂದು ಕೃತಿ ಗ್ರಂಥ ಆಗಬೇಕಾದರೆ ಒಬ್ಬ ಕರ್ತೃ ರಚಯಿತ ಇರಲೇಬೇಕು. ಇದು ಲೋಕಪ್ರಸಿದ್ಧಿ. ಹೀಗಿರುವಾಗ ಯಾರಿಂದಲೂ ಬರೆಯದೇ ಇರಲು ಸಾಧ್ಯವೇ ಇಲ್ಲ. ಯಾರೊಬ್ಬ ಮಹರ್ಷಿ ಬರೆದಿರಬೇಕು. ಬರೆದಾದ ಮೇಲೆ ತನ್ನ ಹೆಸರನ್ನು ಬೇಕೆಂದೇ ತಿಳಿಸಿಲ್ಲ. ಹೀಗಾಗಿ ಒಬ್ಬ ಕರ್ತೃ ಇರಲೇಬೇಕು. ಯಾರೂ ಬರೆಯದೇ ಇರುವ ಒಂದು ಗ್ರಂಥವೂ ಇರುವುದಿಲ್ಲ. ತಸ್ಮಾತ್ ವೇದಗಳನ್ನು ಯಾರೊಬ್ಬರು ಬರೆದಿರಲೇಬೇಕು ಅಂದ ಮೇಲೆ ಅಪೌರುಷೇಯಗಳೆಂದು ಹೇಳುವುದು ಅಸಂಗತ ಅಸಂಭವ. ಈ ರೀತಿ ಚಾರ್ವಾಕಾದಿ ನಾಸ್ತಿಕ ಮತದವರು ಹೇಳುತ್ತಾರೆ. ಪುಟ ೨ರಲ್ಲಿ ಇದಕ್ಕೆ ಉತ್ತರ ಕಾಣಬೇಕು.

ಲೋಕದಲ್ಲಿ ಕೆಲ ಕೃತಿಗಳು (Sacred Books) ಯಾರಿಂದಲೂ ಬರೆದುದಲ್ಲ ಅಂತ ಪ್ರತೀತಿ ಇದೆ. ಉದಾಹರಣೆಗೆ (1) ಬೈಬಲ್‌ನಲ್ಲಿ ಎರಡು ಭಾಗಗಳಿವೆ. (i) Old testament (ii) New testament ಅಂತ. Old testament (ಹಳೆ ಒಡಂಬಡಿಕೆ)ನಲ್ಲಿ ೩೯ ಅಧ್ಯಾಯಗಳಿವೆ. ಮೊದಲಿನ ಐದು ಗ್ರಂಥಗಳನ್ನು Penta

Tuech ಅಂದರೆ ಪ್ರಥಮವಾಗಿ ಐದು ಸರ್ಗಗಳಿವೆ. (1) Book of genesis (2) Book of Gods (3) Book of kings ಇತ್ಯಾದಿ. ಇವುಗಳನ್ನು Gospel (Godspelt) Holy words ಎನ್ನಲಾಗುವುದು. (1) Book of genesis ನಲ್ಲಿ ಒಂದು ಉಲ್ಲೇಖವಿದೆ. ಆಗ Isreal ಎಂಬ ದೇಶವಿದ್ದಿತು. ಈಗಲೂ ಇದೆ. Palestineಗೆ ಪಶ್ಚಿಮಕ್ಕೆ ಆ ದೇಶದ ಜನರನ್ನು Jews ಎನ್ನುತ್ತಿದ್ದರು. Johava (ಹೀಬ್ರೂ ಭಾಷೆಯಲ್ಲಿ) ಅವರ ಆರಾಧ್ಯ ದೇವ ಇಸ್ರೇಲ್ ಅನ್ನು Egyptನ ರಾಜರು (Pharos-ನೈಲ್ ನದಿ ಪ್ರಾಂತ್ಯ) ಯುದ್ಧಮಾಡಿ Isreal ಅನ್ನು ವಶಪಡಿಸಿಕೊಂಡು ಯುದ್ಧದಲ್ಲಿ ಸೋತ Jewsರನ್ನು ಗುಲಾಮರನ್ನಾಗಿ (Slaves) ಮಾಡಿದರು. Jews ವಶಗೊಂಡರೂ ತಮ್ಮ ಧರ್ಮ ಬಿಡಲಿಲ್ಲ. ಹೀಗೆ ಒಂದು ಸಾವಿರ ವರ್ಷ ಕಳೆಯಿತು. ಅವರಲ್ಲಿ Moses ಎಂಬ ದೈವೀಸ್ವಭಾವ ಸಾಧು ಹುಟ್ಟಿ ಹೇಗೋ Egyptನ ರಾಜರನ್ನು ಒಲಿಸಿ ಗುಲಾಮರಾದ Jews ರನ್ನು ಬಿಡುಗಡೆ ಮಾಡಿ ಅವರನ್ನೆಲ್ಲಾ ಕರೆದುಕೊಂಡು ತಮ್ಮ ತಾಯ್ನಾಡಾದ ಇಸ್ರೇಲಿಗೆ ಹೋಗುತ್ತಿದ್ದ. Jews ಜನಾಂಗಕ್ಕೆ Moses - Prophet ಆಗಿದ್ದ.

ಹೀಗೆ ಅವರೆಲ್ಲರನ್ನು ಕರೆದುಕೊಂಡು ಹೋಗುವಾಗ ಗಾಜ಼ಾ (Gaza) ಎಂಬ ಗುಡ್ಡಗಾಡು ಪ್ರಾಂತ್ಯಕ್ಕೆ ಸೇರುತ್ತಾರೆ. ಅಲ್ಲಿ ಒಂದು ರಾತ್ರಿ ತಂಗಿರುತ್ತಾರೆ. ಮಧ್ಯರಾತ್ರಿ Moses ಭಗವಂತನನ್ನು ಚಿಂತಿಸುತ್ತಾ ಒಂದು ಗುಹೆಯಲ್ಲಿ ಇದ್ದಾಗ ಹಠಾತ್ತಾಗಿ ಒಂದು ಬೆಳಕು ದೇದೀಪ್ಯಮಾನವಾದ ಪ್ರಕಾಶ ಕಾಣುತ್ತದೆ. ಬೆಳಕು ಏನು, ಯಾರು ಎಂದು ಗೊತ್ತಾಗುವುದಿಲ್ಲ. ಆದರೆ ಬೆಳಕಿನಿಂದ ಕೆಲ ಶಬ್ದ ಕೇಳಿಸಿತು. Mosesಗೆ ಆದೇಶ ನೀಡಿತು. ಅದನ್ನೇ "Ten commandments" (ಹತ್ತು ಆದೇಶ) ಅಂತ ಕರೆಯಲಾಗಿದೆ.

ಈ ಆದೇಶವನ್ನು Moses ಕೇಳಿಸಿಕೊಂಡು ಆಮೇಲೆ ಅದೇ ಗುಹೆಯ ಎರಡು ಬಂಡೆಯ ಮೇಲೆ ಕೆತ್ತಲ್ಪಟ್ಟಿತು. ಯಾರು ಕೆತ್ತಿದರೋ ಗೊತ್ತಿಲ್ಲ. ಹೀಗೆ Moses ತಾನು ಪ್ರಥಮ ಬಾರಿಗೆ ಕೇಳಿಸಿಕೊಂಡಿದ್ದರಿಂದ ಅವು ಯಾರಿಂದಲೂ ಬರೆಯಲ್ಪಟ್ಟಿಲ್ಲ. ಅದು ದೇವವಾಣಿ. **ಪುರುಷಕೃತ**ವಲ್ಲ ಅಪೌರುಷೇಯ ಅಂತ ಯಹೂದಿಗಳ ನಂಬಿಕೆ.

ಮುಂದೆ ಜೀಸಸ್ ಕ್ರಿಸ್ತನು 0 to 1 A.D.ಯಲ್ಲಿ ಜನಿಸಿ ತಾನು ಭಗವಂತನ ಮಗನೆಂದು ಎಲ್ಲಿಯೂ ಹೇಳಿಕೊಂಡಿಲ್ಲ. ಯಹೂದಿಗಳ ಮತವನ್ನು ನಿರಾಕರಿಸಿದನೇ ಹೊರತು ಬೈಬಲನ್ನು ಬರೆದವನಲ್ಲ. (ಯಾರಿಂದಲೂ ಕೇಳಿಸಿಕೊಂಡಿಲ್ಲ). ಆದರೆ ಕ್ರಿಸ್ತ ಮತ ಪ್ರವರ್ತಕರು ಕಾಲಕ್ರಮೇಣ ಬೈಬಲ್ ಎರಡನೇ ಭಾಗ New Testament ಅನ್ನು ಬರೆದರು. ಇದೇ ಕ್ರಿಸ್ತರಿಗೆ ಪವಿತ್ರ ಗ್ರಂಥವಾಯಿತು. ಇದರಲ್ಲಿಯೂ ೩೬ ಪುಸ್ತಕಗಳಿವೆ.

ಜೀಸಸ್ ಕ್ರಿಸ್ತನ ಉಪದೇಶವನ್ನು ಶಿಷ್ಯರು ಬರೆದಿಟ್ಟರು. ಆದರೆ ಕ್ರಿಸ್ತನು ತನಗೆ ಯೋಚನೆ (ವಿಚಾರ) ಬಂದಾಗ ಹೇಳುತ್ತಿದ್ದ. ಆಧಾರ ಪ್ರಮಾಣರಹಿತವಾಗಿತ್ತು. ಅವನ



ಶಿಷ್ಯರು ಮುಖ್ಯವಾಗಿ ಬೈಬಲ್‌ನಲ್ಲಿ ಐದು ಜನರ ಉಲ್ಲೇಖವಿದೆ. ಅವರನ್ನು Saint (ಸಂತ) ಅಂತ. Augustine, Peter, Duke, John, Mathew ಅಂತ. ಇವರೇ ಹಂತ ಹಂತವಾಗಿ ಬರೆಯುತ್ತಿದ್ದರು. ಕ್ರಿಸ್ತನು ತಾನು ದೇವಪುತ್ರ ಅಂತ ಹೇಳಿಕೊಂಡಿಲ್ಲ. ತಿಳಿದೂ ಇರಲಿಲ್ಲ. Peter ಎಂಬ ಸಾಧು (Hermit) ಕ್ರಿಸ್ತನನ್ನು ಕಂಡಾಗ ಹೇಳಿದ. (Peter the Hormit) **"ನೀನು ದೇವ ಪುತ್ರ - You are Son of God"** ಅಂತ ಕರೆದು ರೋಮನ್ ರಾಜರನ್ನು ದೂಷಿಸಿದ. ರೋಮನ ರಾಜರು ತಾವೇ ದೇವತೆಗಳು ಅಂತ ತಮ್ಮ ದೇವಾಲಯಗಳನ್ನು ನಿರ್ಮಿಸಿದರು. ಇವರಲ್ಲಿ Tutenkhoton ಎಂಬ ಪ್ರಬಲ ಅರಸು ಅವನನ್ನು ಖಂಡಿಸಿ ಕ್ರಿಸ್ತನು ದೇವರ ಲೋಕ ಬೇರೆ ದೂರ Heaven ಅಂತ ಇದೆ. ಇದನ್ನು ನಂಬದೇ ಇದ್ದವರು ನರಕ Hellಕ್ಕೆ ಹೋಗುತ್ತಾರೆ ಎಂದು ಪ್ರಚಾರ ಮಾಡಿದ. ಕ್ರಿಸ್ತನ ಮಾತನ್ನು ನಂಬದೇ ಇರುವವರನ್ನು Heathens ಅಂತ ಹೇಳಲಾಯಿತು. ಈ ರೀತಿ ಉಪನ್ಯಾಸ (Sermans)ನ್ನು ಮಾಡುತ್ತಲಿದ್ದ. ರೋಮನ್ನರು ಸಹಿಸಲಾರದೆ ಕ್ರಿಸ್ತನ ಶಿಷ್ಯನೊಬ್ಬ Judos ಎಂಬುವನಿಗೆ ಲಂಚ ಕೊಟ್ಟು ಬಂಧಿಸುವಂತಾಯಿತು. ಸಿಲುಬೆಗೆ (Cross) ಏರಿಸಿದರು. ಕ್ರಿಸ್ತನ ಜೊತೆಗೆ ಇನ್ನೂ ಇಬ್ಬರು ಕಳ್ಳರನ್ನು ಸಿಲುಬೆಗೆ ಹಾಕಿದರು. ಅವರು ಸಂಜೆ ಹೊತ್ತಿಗೆ ಮರಣಿಸಿದರು. ಆದರೆ ಕ್ರಿಸ್ತನು ಮೂರು ದಿನ ಜೀವಂತವಾಗಿದ್ದು ಮೂರನೆಯ ದಿನ ಸಂಜೆ ಪ್ರಾಣ ಬಿಟ್ಟನು. ಬುಧವಾರ ಬೆಳಿಗ್ಗೆ ಸಿಲುಬೆಗೆ ಏರಿಸಿದರೆ, ಶುಕ್ರವಾರ ಸಂಜೆ ಮರಣಿಸಿದ. ಆ ದಿನವನ್ನು **Good Friday** ಎಂದು ಕರೆಯಲಾಯಿತು. ತಾನು ರೋಮನ್ನರಿಗೆ ಸಿಕ್ಕಿ ಬೀಳುವುದಾಗಿ ಅವನು ಆಂತರಿಕ (Premonition)ವಾಗಿ ತಿಳಿದಿದ್ದ. ಹಿಂದಿನ ಸಂಜೆ ಶಿಷ್ಯರ ಗುಂಪಿನಲ್ಲಿ ತನ್ನ ಕೊನೆ ಘಳಿಗೆ ಉಪದೇಶ ನೀಡಿದ. (Last supper and Serman) ಶಿಷ್ಯನೊಬ್ಬ Judosನು ದ್ರೋಹಿಯಾದ.

**ಒಂದು ಮುಖ್ಯ ವಿಷಯ :** ಜೀಸಸ್ ಕ್ರಿಸ್ತನ ಉಪದೇಶಗಳು ಬಹುತೇಕ ವೇದಗಳಲ್ಲಿ ಉಲ್ಲೇಖ ಸೂತ್ರಗಳೇ ಸಾಮೀಪ್ಯ ಆಗಿರುತ್ತದೆ. ರಷ್ಯಾ ದೇಶದ **ನಿಕೋಲಸ್ ನೋಟೋವಿಚ್‌ರ್** ಒಂದು ಕ್ರಿಸ್ತನ ಜೀವನದ ಬಗ್ಗೆ (The unknown life of Jesus Christ) ೧೮೯೪–೯೫ರಲ್ಲಿ ಬರೆದಿದ್ದಾನೆ. ಹೀಗೆ ಇನ್ನೂ ಇಬ್ಬರು ಬರೆದಿದ್ದಾರೆ. ಅವರ ಹೇಳಿಕೆ ಪ್ರಕಾರ ಜೀಸಸ್‌ನು ತನ್ನ ೧೪ರಿಂದ ೨೫ರ ವಯಸ್ಸಿನಲ್ಲಿ ಭಾರತಕ್ಕೆ ಬಂದಿದ್ದನೆಂದು ತತ್ರಾಪಿ ಆಗಿನ ವೇದಭೂಮೀ ಎಂದೆನಿಸಿಕೊಂಡ. ಕಾಶ್ಮೀರಕ್ಕೆ ಬಂದು ಸ್ವಲ್ಪ ವೇದಗಳ ಬಗ್ಗೆ ತಿಳಿದ ನಂತರ ಬೌದ್ಧ ಧರ್ಮದ ಬಗ್ಗೆಯೂ ತಿಳಿದಿದ್ದನೆಂದು ಹೇಳಿ ಕ್ರಿಸ್ತನ ಉಪದೇಶವು ಪ್ರಾಯಶಃ ವೇದಾಧಾರಿತ ತತ್ವಗಳ ಹಿನ್ನೆಲೆಯಲ್ಲಿ ಕಾಣಬಹುದು ಎಂದಿದ್ದಾನೆ. ಇದು ಈಗಿನ ಕ್ರೈಸ್ತ ಮತಸ್ಥರು ಖಂಡಿಸಿಲ್ಲವಾದರೂ ನಂಬುವುದಿಲ್ಲ.

ಜೀಸಸ್ ಕ್ರೈಸ್ತನ ಹೆಸರನ್ನು ಪಿ.ಎನ್. ಓಕ್ (ನಾರಾಯಣ ಓಕ್) ಎಂಬಾತನು "ಈಶ್ವರ ಕೃಷ್ಣ" ಎಂಬ ನಾಮವನ್ನು ಯಹೂದಿಗಳು Jesus Christ ಅಂತ ಪರಿವರ್ತಿಸಿದರು ಎಂದಿದ್ದಾನೆ. ಎಷ್ಟರ ಮಟ್ಟಿಗೆ ಸತ್ಯವೋ ಶೋಧನೆ ಆಗಬೇಕು.

ಒಟ್ಟು ಜೀಸಸ್‌ನ ಉಪದೇಶಕ್ಕೂ ವೈದಿಕ ಉಪದೇಶಕ್ಕೂ ತುಂಬ ಹತ್ತಿರ ಹೋಲಿಕೆ ಇರುವುದಾಗಿ ಕಂಡುಬರುತ್ತದೆ ಎಂದಿದ್ದಾನೆ.

**ವಿಮರ್ಶಾತ್ಮಕ ವಿಷಯ**

ಜೀಸಸ್ ಜನಿಸಿದ್ದು ಜೆರೂಸಲೆಂ ಎಂಬ ಚಿಕ್ಕ ನಗರದ ಒಂದು ಮನೆಯಲ್ಲಿ. ಆ ಮನೆಯಲ್ಲಿ ತಂಗಲು ತಾಯಿ ಮೇರಿಗೆ ಸ್ಥಳಾವಕಾಶವಿದ್ದಿಲ್ಲ. ಆದರೆ ಆ ಮನೆ ಛತ್ರ ಎಂತಲೂ ಹೇಳುವುದುಂಟು. ಅಲ್ಲಿ ಹಿಂಭಾಗದಲ್ಲಿ ದನಗಳ ಕೊಟ್ಟಿಗೆ ಇತ್ತು. ರಾತ್ರಿ ಅಲ್ಲಿಯೇ ತಾಯಿ ತಂಗಿದಳು. ರಾತ್ರಿ ಶಿಶುವಿನ ಪ್ರಸವವಾಯಿತು ಎಂದು ಐತಿಹ್ಯವಿದೆ.

ಇಲ್ಲಿ ನಮ್ಮ ದೇಶದಲ್ಲಿ ಶ್ರೀಕೃಷ್ಣನ ಜನನ ಒಂದು ಕಾರಾಗೃಹದಲ್ಲಿ ಆಯಿತು. ಆದರೆ ಕ್ರಿಸ್ತನು ಸಾಧಾರಣ ಶಿಶುವಿನಂತೆ ಜನಿಸಿದ. ಇಲ್ಲಿ ಕೃಷ್ಣನು ಚತುರ್ಭುಜಗಳಿಂದ ದೇವಕೀ ವಸುದೇವರಿಗೆ ಕಾಣಿಸಿಕೊಂಡು ತಾನು ಸಾಕ್ಷಾತ್ ನಾರಾಯಣನೇ ಅಂತ ತಿಳಿಸಿ ತೋರಿಸಿದ.

ಜೀಸಸ್‌ಗೆ ತಾಯಿ ಮೇರಿ ತಂಗಿ ಮೇರಿ, ಒಬ್ಬ ಸಖೀ ಮೇರಿ, ಅಂತ ಮೂರು ಜನರಿದ್ದರು. Mother Mary, Mary Magdolina and Sister Marey ಅಂತ.

ಇಷ್ಟು ವಿಷಯಗಳು ಬೈಬಲ್‌ನಲ್ಲಿ ಆಮೇಲೆ ವ್ಯಾಖ್ಯಾನಿಸಿದವರು ಕಥೆ ಬೆಳೆಸಿದರು ಎಂದು ತಿಳಿದುಬರುತ್ತದೆ.

ರೋಮನ್ನರು ಕ್ರಿಸ್ತನನ್ನು **Heretic Blashemer** ಎಂದು. ತಾನು ದೇವ ಪುತ್ರ (ದೇವನೇ) ಅಂತ ಹೇಳುವುದನ್ನು ಕೇಳಿ ಅವನನ್ನು ಶಿಲುಬೆಗೆ ಏರಿಸಿದರು. ಮೂರು ದಿನಗಳ ನಂತರ ಮರಣ ಹೊಂದಿದ. ಅಂದಿನಿಂದ Catholic ಮತ ಆರಂಭವಾಯಿತು. ಅವರ ಪ್ರಕಾರ ದೇವನು ಮಗನಾಗಿ ಹುಟ್ಟಿ ಮರಣಿಸಿ Ghost (dead person appearing to be living) ಆದ. ಇದನ್ನು Trinity ಅನ್ನುವರು. God Father, Born as son and Became a Ghost.

"Ghost ಅಂದರೆ ಪಿಶಾಚಿಯಲ್ಲ A Spectre ಭೂತದಂತೆ ಅಸ್ಪಷ್ಟ ಮಾನವಾಕೃತಿ. God gave his only son who died gave his blood to save Mankind and became a Ghost" ಅಂತ ಬೈಬಲ್‌ನಲ್ಲಿ ಹೇಳಲಾಗಿದೆ. ಇದನ್ನೇ Trinity ಅಂತ ಕರೆಯಲಾಗಿದೆ.



ಜೀಸಸ್ ಮರಣಿಸಿದ ನಂತರ ಅವನ ಪಾರ್ಥಿವ ಶರೀರವನ್ನು ತಾಯಿ ಮೇರಿ ತಂಗಿ ಮೇರಿ ರೋಮನ್ನರ ಅನುಮತಿ ಪಡೆದು ಒಂದು ಗುಹೆಯಲ್ಲಿ ಸಮಾಧಿ ಮಾಡುತ್ತಾರೆ. ಒಂದು ಶಿಲಾ ಪೆಟ್ಟಿಗೆ ಮಾಡಿ ಹೂತಿರುತ್ತಾರೆ. ಇದನ್ನು Toomb Holy sepulchre ಪವಿತ್ರ ಸಮಾಧಿ ಅನ್ನಲಾಯಿತು. ಸಮಾಧಿಯಾದ ಮಾರನೆಯ ದಿನ ಜೀಸಸ್‌ನ ಶವವಿರುವುದಿಲ್ಲ. Ghost ಆಗಿ ಹೊರಗೆ ಬಂದು ಸಂಚರಿಸುತ್ತಿದ್ದ. ರೋಮ್ ನಗರದಲ್ಲಿ ಇವನ ಅನುಯಾಯಿಗಳು ಬಹಳ ಜನರಿದ್ದರು. ಇವರನ್ನು ಕ್ರಿಶ್ಚಿಯನ್ಸ್ (Christians) ಅಂತ ಕರೆದು ರೋಮ್ ದೇಶದ ರಾಜರು ನೀರೋ ಎಂಬುವನು ಇವರನ್ನು ಹಿಂಸಿಸಿ ಸಂಹರಿಸುತ್ತಿದ್ದ (Persecute) ಈ ವಿಷಯ ಘೋಸ್ಟ್ ಜೀಸಸ್‌ಗೆ ತಿಳಿಯಿತು. ಅವರನ್ನು ರಕ್ಷಿಸಲು Ghost ರೂಪದಿಂದ ಹೊರಟಿದ್ದ ದಾರಿಯಲ್ಲಿ Augusteen ಎಂಬ ಪಾದ್ರಿ ಭೇಟಿಯಾಗಿ ಹೇಳಿದ – Quovadis (ಎಲ್ಲಿಗೆ ಹೊರಟಿದ್ದೀಯಾ?) ಎಂದು. ನಾನು ಎರಡನೇ ಸಲ ಶಿಲುಬೆಗೆ ಏರಲು ರೋಮ್‌ಗೆ ಹೋಗುತ್ತಿದ್ದೇನೆ (To be crucified for the second time) ಹೀಗೆ ವರ್ಣಿತವಾಗಿದೆ.

ಇಡೀ ಬೈಬಲ್ ಹಿಬ್ರೂ ಭಾಷೆಯಲ್ಲಿ ಬರೆಯಲಾಗಿತ್ತು. ಆಮೇಲೆ ಲ್ಯಾಟಿನ್, ರೋಮನ್, ಇಂಗ್ಲೀಷ್‌ಗಳಿಗೆ ತರ್ಜುಮೆಯಾಯಿತು.

**ಕ್ರಿಸ್ತಮತದ ಸಾರಾಂಶ :** ದೇವರಿದ್ದಾನೆ. ಆದರೆ ಹೇಗಿದ್ದಾನೆ ? ವರ್ಣ, ರೂಪ, ಆಕಾರ ಇತ್ಯಾದಿಯಾಗಿ ತಿಳಿಸಿಲ್ಲ. ಕಾರಣ ಕ್ರಿಸ್ತನಿಗೆ ಭಗವಂತನ ಅಪರೋಕ್ಷವಾಗಿಲ್ಲ. ಅವನ ಅನುಯಾಯಿಗಳಿಗೂ ಗೋಚರವಾಗಿಲ್ಲ. ಆದ್ದರಿಂದ ಅವನ ಪ್ರತೀಕ ಶಿಲುಬೆಯನ್ನು ದೇವರೆಂದು ತಿಳಿದು ಆರಾಧಿಸುತ್ತಾರೆ.

ಸತ್ಯ, ದಯೆ, ದಾನ, ದೀನರಲ್ಲಿ ಅನುಕಂಪ ದೀನರ ಸೇವೆಯೇ ಮುಖ್ಯ. ವಾರಕ್ಕೊಂದು ದಿನವಾದ ರವಿವಾರ ಚರ್ಚಿಗೆ ಹೋಗಿ ಪ್ರಾರ್ಥನೆ ಮಾಡಬೇಕು. **ಭಾನುವಾರ**ವೇ ಏಕೆ ಪವಿತ್ರ ? ಅವರ ಇತಿಹಾಸ ಪ್ರಕಾರ ದೇವರು ಸೃಷ್ಟಿಸಲು ಆರು ದಿನಗಳು ಬೇಕಾಯಿತು. ಶ್ರಮ ಪರಿಹಾರಕ್ಕಾಗಿ ಏಳನೆಯ ದಿನ ವಿಶ್ರಾಂತಿ ತೆಗೆದುಕೊಂಡು ಪ್ರಾರ್ಥಿಸಿದ. Sundayಯುನ್ನು Sabbathday ಅಂದಿದೆ. ಏಳನೆಯು ದಿನ ರವಿವಾರವಾದ್ದರಿಂದ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಪ್ರಾರ್ಥನೆ ಶ್ರವಣ ಮಾಡಬೇಕು. ಭಗವಂತನನ್ನು ಕರೆಯಬೇಕು. O ! GOD THOU Art in the heaven. Please come and save us ಅಂತೆ God ಸ್ವರ್ಗದಲ್ಲೇ ಇರುತ್ತಾನೆ. ಕರೆದಾಗ ಮಾತ್ರ ಬರುತ್ತಾನೆ ಅಂತ (ಎಲ್ಲರ ಅಂತರ್ಯಾಮಿ ಅಂತ ಹೇಳಿಲ್ಲ)

ಆದರೆ ಸ್ವಾಮಿ ಸರ್ವಾಂತರ್ಯಾಮಿ, ಸರ್ವವ್ಯಾಪ್ತ ಸಮಸ್ತ ಜೀವರಾಶಿಗಳ ಹೃದಯಾಂತರ್ಯಾಮಿ ಆಗಿರುತ್ತಾನೆ ಎಂದು ವೈದಿಕ ಧರ್ಮ ಸಾಹಿತ್ಯದಲ್ಲೇ ಕಾಣುತ್ತೇವೆ.

ಕ್ರಿಸ್ತ ಮತದಲ್ಲಿ ಹಾಗಿಲ್ಲ. ಇಷ್ಟೆಲ್ಲಾ ಅನ್ಯಮತೀಯರ ವಿಷಯ ನಾವೇಕೆ ತಿಳಿಯಬೇಕು. ಏನು ಪ್ರಯೋಜನ. ನಾವು ವೈಷ್ಣವರು. ನಮ್ಮ ತತ್ವಗಳನ್ನಷ್ಟೇ ತಿಳಿದುಕೊಂಡಿದ್ದರೆ ಆಯಿತು. ಅವರ ಮತ ಏನೇ ಇರಲಿ. ನಮಗ್ಯಾಕೆ ಬೇಕು ಎಂದು ಆಕ್ಷೇಪಿಸುವವರಿಗೆ ಸಮಾಧಾನ

೧. ಭರತಖಂಡವು ಬ್ರಹ್ಮಾಂಡದ ಒಂದು ಭಾಗ. ಭಗವಂತ ಬ್ರಹ್ಮಾಂಡವನ್ನು, ಪ್ರಕೃತಿಯನ್ನು ಉಪಾದಾನ ಮಾಡಿ ತಾನು ಸೃಷ್ಟಿ ಮಾಡಲು ಎಂದು ವೇದ ಪುರಾಣಗಳಲ್ಲಿ ಸ್ಪಷ್ಟ ನಿಮಿತ್ತ ಕಾರಣ ವಾಕ್ಯವಿದೆ. ಆದರೆ ಅನ್ಯಮತಗಳಲ್ಲಿ ಜಗತ್ತನ್ನು ಭಗವಂತ ಸೃಷ್ಟಿಸಿದ ಅಂತಷ್ಟೇ ಹೇಳಿ ಹೇಗೆ ಯಾವುದರಿಂದ ನಿರ್ಮಿಸಿದ ಅನ್ನುವುದನ್ನು ತಿಳಿಸಿಲ್ಲ.

೨. ಭಗವಂತ ನಿಮಿತ್ತ ಕಾರಣ–ಸೃಷ್ಟಿಗೆ. ಅನಂತಕೋಟಿ ಜೀವರಾಶಿಗಳು ಸ್ವರೂಪಾನುಸಾರ (ಸತ್ವ, ರಜಸ, ತಮಸ) ಗುಣಗಳಿಗನುಸಾರ ಸೃಷ್ಟಿಸಿದ. ತಾರತಮ್ಯವಿದೆ. ಮುಕ್ತಿ – ಸ್ವರ್ಗ ತಮಸ್ಸುವೆಂಬ ಪ್ರಭೇದವಿದೆ. ಯೋಗ್ಯತೆ ಸಾಧನಾನುಸಾರ ಪ್ರದಾನ ಮಾಡುತ್ತಾನೆ. ಈ ವಿಷಯ ಅನ್ಯರಲ್ಲಿ ಕಾಣಲಾಗದು.

೩. ಮುಕ್ತಿ (ಅಂದರೆ Eternal bliss, liberation) ಎಂದಿಷ್ಟೇ ತಿಳಿಸಿ, ಮುಕ್ತಿಯ ಲಕ್ಷಣ ಎಂಥದ್ದು ಅನ್ನುವುದನ್ನು ತಿಳಿಸಿಲ್ಲ. ಹಾಗೇನೇ ನರಕ (Hell) ಅಂತಾರೆ ವಿನಃ ಅದರ ಸ್ವರೂಪ ಎಂಥದ್ದು ಎನ್ನುವುದನ್ನು ತಿಳಿಸಿಲ್ಲ.

ಮುಕ್ತಿಯೋಗ್ಯರನ್ನು, ತಮೋಯೋಗ್ಯರನ್ನು ಒಂದು ಕಡೆ ಕೂಡಿ ಹಾಕುತ್ತಾರೆ. ಇದನ್ನು Pergatory ಎಂದು ಕರೆಯಲಾಗಿದೆ.

ಭಗವಂತ ಒಂದು ದಿನ (ಯಾವಾಗ ಗೊತ್ತಿಲ್ಲ) ಪ್ರತ್ಯಕ್ಷನಾಗಿ ಎರಡು ವಿಧ ಜೀವರನ್ನು ಅವರ ಯೋಗ್ಯತೆಗೆ ತಕ್ಕಂತೆ (Last day of judgement) ಸಜ್ಜನರನ್ನು Heaven Eternal bliss ನಿತ್ಯಮುಕ್ತರನ್ನಾಗಿ ದುರ್ಜನರನ್ನು (Hell Eternal damnation) ನರಕ, ನಿತ್ಯ ನರಕಗಳಿಗೆ ಕಳಿಸುತ್ತಾನೆಂದಿದೆ. ಅಲ್ಲಿಯವರೆಗೂ ಅಂತರ್ಪಿಶಾಚಿಯಾಗಿ ತೇಲಾಡುತ್ತಿರಬೇಕು. ಇಂತಹ ಅನೇಕ ಪ್ರಶ್ನೆಗಳಿಗೆ ಸಮರ್ಪಕ ಸಮಾಧಾನವಿಲ್ಲ.

Soul ಜೀವನಿದ್ದಾನೆ ಅನ್ನುತ್ತಾರೆ. ಮರಣ ಹೊಂದಿದ ಮೇಲೆ (ದೇಹ) ಜೀವನಿಗೆ ಪುನರ್ಜನ್ಮ ಇಲ್ಲ. ಹೆಚ್ಚು ತಿಳಿಸಿಲ್ಲ.

ಜೀವರಲ್ಲಿ ಸಜ್ಜನ ದುರ್ಜನರೆಂದು ಹೇಳಿದ್ದಾರೇ ಹೊರತು ವಿಭಾಗ ಹೇಗಾಯಿತು. ತಿಳಿಸದೇ ಭಗವಂತನಿಗೆ ಪಕ್ಷಪಾತವಿದೆ ಎಂಬ ದೋಷಾರೋಪಣೆ ಮಾಡುವಂತೆ ಬರೆದಿದ್ದಾರೆ. ಹೀಗೆ so many unanswered unjustified enigmatic statements ಇಂದ ಕೂಡಿದೆ Bible.



ಆದರೆ ಇದು ದುಷ್ಟಮತವಲ್ಲ. ಈಶ್ವರನ ಅಸ್ತಿತ್ವವನ್ನು ಒಪ್ಪುತ್ತಾರಾದರೂ ಭಗವಂತನ ವಿಷಯಕ ಯಥಾರ್ಥ ಜ್ಞಾನವಿರುವುದಿಲ್ಲ. ಅನ್ಯಥಾಜ್ಞಾನ ಅಜ್ಞಾನವಿರುವುದು.

ಹೀಗಾಗಿ ಬೈಬಲನ್ನು ಕಾಲಕ್ರಮೇಣ ಆ ಮತ ಪ್ರವರ್ತಕರು ರಚಿಸಿದರು. ಅಪೌರುಷೇಯವಲ್ಲ. Mosesಗೆ ಕೃತಿ ಗೋಚರವಾಗಿ ಹತ್ತು ಆದೇಶಗಳು ಮಾತ್ರ ಪುರುಷ ಕೃತವಲ್ಲ. ಆದರೆ ಅದಕ್ಕೆ ಆದಿ ಇದೆ. ಅನಾದಿಯಾಗಲಿಲ್ಲ. ಬೈಬಲ್ ಅನಾದಿಯೂ ಅಲ್ಲ. ಅಪೌರುಷೇಯವೂ ಆಗುವುದಿಲ್ಲ.

**ಇಸ್ಲಾಮ್ ಬಗ್ಗೆ ಪರಿಚಯ :** ಇನ್ನು ಇಸ್ಲಾಂ ಮತದಲ್ಲಿಯೂ ಇಂತಹ ಅನಾದಿ, ಅಪೌರುಷೇಯ ಕೃತಿ ಇಲ್ಲ. ವಿಚಾರ ಮಾಡೋಣ. ಇಸ್ಲಾಂ ಮತ ಪ್ರವರ್ತಕ ಮೊಹಮ್ಮದ್. ಈತನು ಅರೇಬಿಯಾ ದೇಶದಲ್ಲಿ ಮೆಕ್ಕಾ ಅನ್ನುವ ನಗರದಲ್ಲಿ ಹುಟ್ಟಿದವ ಕ್ರಿ.ಶ. 600. ಅರೇಬಿಯಾ ಎಂದರೆ ಮರಳುಗಳ ಪ್ರಾಂತ್ಯ ಅಂತ (Desert Land). ಈ ದೇಶದಲ್ಲಿ ಅಲ್ಲಲ್ಲಿ ಕೆಲಕಡೆ Oasis (ಮರುಭೂಮಿಯಲ್ಲಿ ಹಸಿರಾಗಿರುವ ಜಾಗ, ಫಲವತ್ತಾದ ಪ್ರದೇಶ) ಇಲ್ಲಿ ನೀರು ಚಿಲುಮೆಗಳು ಇದ್ದವು. ಅಂತಹ ನೀರು ಚಿಲುಮೆಗಳಿರುವ ಜಾಗದಲ್ಲಿ ಪಟ್ಟಣಗಳು ಹುಟ್ಟಿದವು. ಮೆಕ್ಕ, ಮದೀನ, ಮನೇಸ ಹೀಗೆ ಊರುಗಳಿದ್ದವು. ಈ ದೇಶದಲ್ಲಿ ಮೂರು ಪಂಗಡ ಜನಾಂಗವಿದ್ದಿತು. Gheroshins, Bedoins and Khureshis ಅಂತ. Gherosish ವ್ಯಾಪಾರದಲ್ಲೇ ತೊಡಗಿದರು. ಇವರಿಗೆ ಸ್ಪರ್ಧಿಯಾಗಿ Bedoins ಪರಸ್ಪರ ಕಾದಾಡುತ್ತಿದ್ದರು. ಒಂಟೆ ಮೇಲೆ ಸಾಗುತ್ತಿದ್ದರು (Caravons). Khureshis ಪುರೋಹಿತ ವರ್ಗದವರು. ಮೆಕ್ಕಾ ಪವಿತ್ರ ಸ್ಥಳವಾಗಿತ್ತು. ಖುರೇಷಿಯರು ಇಲ್ಲಿಯ ಕೆಲ ಆಲಯ ಅರ್ಚಕರಾಗಿದ್ದರು. ಮೆಕ್ಕಾದಲ್ಲಿ Kaba ಎಂಬ ಒಂದು ಪವಿತ್ರ ಮಂದಿರವಿದೆ. ವಿಶಾಲವಾದ ಚೌಕ ದೇವಾಲಯ. ಮಧ್ಯದಲ್ಲಿ ಒಂದು ಘನಾಕಾರದ ಆಲಯ (Cubical structure) ಇದೆ (ಇತ್ತು). ಅದರ ನಾಲ್ಕು ಸುತ್ತು ಕೆಲ ಮೂರ್ತಿಗಳಿತ್ತು. (Totamic - Totems). ಮಧ್ಯದಲ್ಲಿರುವ ಆಲಯಕ್ಕೆ ಉತ್ತರ ದಿಕ್ಕಿನಲ್ಲಿ ದ್ವಾರವಿದೆ. ಪೂರ್ವ ದಿಕ್ಕಿನಲ್ಲಿ ಐದರಿಂದ ಐದುವರೆ ಅಡಿ ಎತ್ತರದಲ್ಲಿ ಒಂದು ನಸುಕೆಂಪಿನ ಗುಲಾಕಾರದ ಕಲ್ಲು (Black Red Stone) ಇದನ್ನು **ಅಲ್ಲಾ** ಅಂತ ಕರೆಯುತ್ತಾರೆ. ಅಲ್ಲಾ ಎಂದರೆ ದೇವರು ಎಂದು. (P.N. Oak – ಪಿಂಡರಿ ನಾರಾಯಣ ಓಕ್ ಎನ್ನುವನು ಮುಸಲ್ಮಾನರ ವೇಷಭೂಷಣ ಹಾಕಿಕೊಂಡು 1945-46 ರಲ್ಲಿ ಮೆಕ್ಕಾಗೆ ಹೋಗಿದ್ದ. ಶೋಧನೆ ಮಾಡಿ ಎಲ್ಲವನ್ನೂ ತಿಳಿದುಕೊಂಡು Mekka is a Vishnu temple ಅಂತ ಒಂದು ಪುಸ್ತಕ ಬರೆದು ಪ್ರಕಟಿಸಿದ) ಅವನ ಪ್ರಕಾರ ಅ = ಅಕ್ಷಯ ನಾಶರಹಿತ ಲ್ಲಾ = ಇಂದ್ರ, ಬ್ರಹ್ಮ, ವಿಷ್ಣು ಪ್ರಕಾಶವೆಂಬ ಸಂಸ್ಕೃತ ಭಾಷೆಯ ಸ್ವರೂಪವೆಂದು ಸಾಧಾರದಿಂದ ಬರೆದಿದ್ದಾನೆ. ಅಂದರೆ ಮೆಕ್ಕಾ Kabaದ ಗುಡಿಯಲ್ಲಿ ಒಳಗೆ ವಿಷ್ಣುವಿನ ಎಡಪಾದವಿದೆ. ಸುತ್ತಲೂ

ನಾಲ್ಕು ಗೋಡೆಗಳಲ್ಲಿ ಕೆಲ ಸಂಸ್ಕೃತ ಶಾಸನಗಳಿವೆ ಎಂದು ತೋರಿಸಿರುತ್ತಾನೆ. ಈ ವಿವರಣೆಯನ್ನು ಮುಸಲ್ಮಾನರು ಪ್ರತಿಭಟಿಸಿದರೇ ವಿನಃ ತಪ್ಪು ಎಂದು ಇದುವರೆಗೂ ನಿರಾಕರಿಸಿಲ್ಲ, ಖಂಡಿಸಿಲ್ಲ. ಇರಲಿ.

ಸುತ್ತೂ ಅಲ್ ರಹೀಮ್ ಅಲಜುವೇದಾ ಅಂತ ಶಿಲಾಮೂರ್ತಿಗಳಿದ್ದವು. ಮೊಹಮ್ಮದ್ ತಾನು ಪೈಗಂಬರ್ (Prophet) ಎಂದು ಹೇಳಿಕೊಂಡು ಈಶ್ವರನಿಗೆ ಆಕಾರವೇ ಇಲ್ಲ, ನಿರಾಕಾರ. ಆದ್ದರಿಂದ ಅವನ ಅನುಯಾಯಿಗಳು ಮೂರ್ತಿಪೂಜೆ ಮಾಡಬಾರದೆಂದು ಘೋಷಿಸಿದ.

ಒಮ್ಮೆ ಬೆಳಿಗ್ಗೆ ಮರಳುಭೂಮಿಯ ಒಂದು ಪಾರ್ಶ್ವದಲ್ಲಿ ಏಕಾಂತವಾಗಿ ಚಿಂತಿಸುತ್ತಿದ್ದ ಮೊಹಮ್ಮದ್ ನಿರಕ್ಷರ ಕುಕ್ಷಿ ಓದದೇ ಇದ್ದ. ಹೀಗೆ ಚಿಂತಿಸುತ್ತಿರುವಾಗ ಅಕಸ್ಮಾತ್ತಾಗಿ ಒಂದು ಬೆಳಕು ಕಾಣಿಸಿತು. ಆ ಪ್ರಕಾಶದಿಂದ ಒಬ್ಬ ದೇವದೂತ ಗೋಬ್ರಿಯಲ್ ಬಂದು ಮೊಹಮ್ಮದ್ ಮಾತನಾಡು ವರ್ಣಿಸು ಎಂದ. ಮೊಹಮ್ಮದ್‌ನಿಗೆ ಮಾತನಾಡಲೂ ಆಗಲಿಲ್ಲ. ಏನೆಂದು ಹೇಳಲಿ ಎಂದು ವಿಚಾರ ಮಾಡುವಾಗ ಗೇಬ್ರಿಯಲ್ ಮೊಹಮ್ಮದ್‌ನ ಗಲ್ಲವನ್ನು ಮುಟ್ಟಿದ. ಆಗ ಹೊರಟಿತು ವಾಕ್ಯಗಳು. ಅಲ್ಲಾನು ವರ್ಣನೆ. ರೂಪ Sura ಹೀಗೆ ಮೂವತ್ತು ದಿನಗಳು ನಿತ್ಯ ವಿಚಾರ ಮಾಡುತ್ತಾ ದಿನಕ್ಕೊಂದರಂತೆ ಮೂವತ್ತು ಸುರಾಗಳು ಹೊರಟಿತು. ಇದನ್ನೇ ಮೆಕ್ಕಾ ಸುರಾ ಎನ್ನುತ್ತಾರೆ. ಸುರಾ ಅಂದ Chapter (ಸಂಧಿ) ಆಯಿತು. ಹೀಗೆ ಮೂವತ್ತು ದಿನಗಳು ಸೂರ್ಯೋದಯಕ್ಕೆ ಮುಂಚೆಯಿಂದ ಸೂರ್ಯಾಸ್ತಮವರೆಗೂ ಹೇಳಿದ ವರ್ಣನೆ ಸುರಾಗಳೆಂದೆನಿಸಿದವು. ಈ ಮೂವತ್ತು ದಿನಗಳನ್ನು **ರಂಜಾನ್** ಎಂದು ನಿಷ್ಠಾವಂತ ಮುಸಲ್ಮಾನರು ಬೆಳಿಗ್ಗೆಯಿಂದ ಸೂರ್ಯಾಸ್ತಮದವರೆಗೂ ಉಪವಾಸವಿರುತ್ತಾರೆ. ಸೂರ್ಯಾಸ್ತಮವಾದ ನಂತರ ಊಟ ಮಾಡುತ್ತಾರೆ. ಮೊಹಮ್ಮದ್ ಹೇಳಿದ್ದನ್ನು ಆತನ ಅನುಯಾಯಿಗಳು ಬರೆದಿಟ್ಟರು. ಇದು ಅರಬ್ಬಿ ಭಾಷೆಯಲ್ಲಿವೆ. "ಅಲ್ಲಾಹೋ ಅಕ್ಬರ್" ಹೇ ಭಗವಂತ, ನೀನು ಪರಮಶ್ರೇಷ್ಠ ಉತ್ತಮ ನಿನಗೆ ನಾವು ನಮಸ್ಕಾರ ಮಾಡುತ್ತೇವೆ. "ಸಲಾಂ ವಾಲೇ ಹುಕುಂ" ಸಲಾಂ ನಮನವು. ಹೇ ಭಗವಂತ, ನೀನು ಹುಕುಂ ಆಜ್ಞ ಮಾಡು ಎಂಬರ್ಥವಿರುವುದು. ಹೇ ಭಗವಂತ, "ರೆಹಮ್ ಕರೋ" ಅನುಗ್ರಹಿಸು ಎಂದು ಪ್ರಾರ್ಥಿಸುತ್ತಾರೆ.

ಹೀಗೆ ಇಸ್ಲಾಂ ಧರ್ಮ (ಮದಬ್) ಧರ್ಮವು ಕ್ರಿ.ಶ. ೬೫೦ರಲ್ಲಿ ಬರೆಯಲಾಗಿದೆ. ಇದನ್ನೇ ಪವಿತ್ರ ಖುರಾನ್ ಎನ್ನುತ್ತಾರೆ. ಇಲ್ಲಿಯೂ ಅವರ ಪವಿತ್ರ ಗ್ರಂಥವು ಅನಾದಿ ಹಾಗೂ ಅಪೌರುಷೇಯವೆಂದು ಹೇಳಲ್ಪಟ್ಟಿಲ್ಲ. ಆದಿ ಇದೆ ಅಷ್ಟೆ.

3. **ಪಾರ್ಸಿ ಮತ**ವು ಅತಿ ಪುರಾತನ. ಪ್ರಾಯಶಃ ಕ್ರಿ.ಪೂ. ಮೂರನೇ ಶತಮಾನದಲ್ಲಿ ಪರ್ಷಿಯಾ ದೇಶದಲ್ಲಿ ಇದ್ದಿತು. ಅವರನ್ನು ಪಾರ್ಸಿಯರೆಂದು ಪರಿಗಣಿಸುತ್ತಾರೆ. ಅವರ ಧರ್ಮಪ್ರವರ್ತಕ Jora Thustra (Joraster) ಅವರ



ಪವಿತ್ರ ಗ್ರಂಥವನ್ನು ZENDAVESTA ಎನ್ನಲಾಗಿದೆ. ಅವರೆಲ್ಲಾ ಅಗ್ನಿಯನ್ನು ಉಪಾಸನ ಮಾಡುತ್ತಾರೆ. Johava ಎನ್ನುತ್ತಾರೆ. Zendavesta ಬರೆದ ಗ್ರಂಥ ಅನಾದಿಯಾಗಲಿ, ಅಪೌರುಷೇಯವಾಗಲಿ ಹೇಳಲಾಗದು. ಅವರ ದೇಶವನ್ನು Ariano vayoja ಅಂತ. ಅಂದರೆ Land of the Aryans ಅಂತ. ಕಾಲಕ್ರಮೇಣ ಮುಸಲ್ಮಾನರು ದೇಶವನ್ನು ಆಕ್ರಮಿಸಿದಾಗ ಪಾರ್ಸಿಗಳು ಹಿಂದೂ ದೇಶಕ್ಕೆ Refugees ಆಗಿ ವಲಸೆ ಬಂದರು. ಇಂದಿಗೂ ಅವರು ಬಹುಸಂಖ್ಯಾತರು. ಮುಂಬೈನಲ್ಲಿ ಇರುತ್ತಾರೆ.

4. ಇನ್ನು ಮಿಕ್ಕ ಸಣ್ಣಪುಟ್ಟವೆಂದರೆ ಚೀನಾ ದೇಶದಲ್ಲಿ **Confushious** ಮೊದಲ ಧರ್ಮ ಪ್ರವರ್ತಕ. ಅವರು ಬೋಧಿಸಿದ ಸಿದ್ಧಾಂತವನ್ನು **Confushianism** ಎನ್ನುತ್ತಾರೆ. ಯಾವ ಧರ್ಮಬೋಧವಿರುವುದಿಲ್ಲ. ಅದೇ ದೇಶದಲ್ಲಿ **Toism** ಎಂಬುದು ಹುಟ್ಟಿತು. ನಿರ್ದಿಷ್ಟ ಗ್ರಂಥವಿರುವುದಿಲ್ಲ. ಜಪಾನೂ ಸಹ ಹಾಗೆ ಧರ್ಮಬಾಹಿರವಾಗಿದ್ದಿತು. ಭಾರತದಲ್ಲಿ ಬೌದ್ಧ, ಜೈನ ಮತ್ತು ಸಿಖ್ ಎಂಬ ಮೂರು ಧರ್ಮಗಳು ಹುಟ್ಟಿದವು. ಬೌದ್ಧ ಮತ ಸ್ಥಾಪಕ ಗೌತಮ ಬುದ್ಧ. ಆದರೆ ಗ್ರಂಥಕರ್ತನಲ್ಲ. ಮುಂದಿನ ಅನುಯಾಯಿಗಳು ಅವನ ಉಪದೇಶವನ್ನು ಬೌದ್ಧಧರ್ಮವೆಂದು ಹೇಳಿ **ತ್ರಿಪೀಟಿಕಾ ಪಂಚಶೀಲಾ** ಎಂಬ ಕೆಲ ಗ್ರಂಥಗಳನ್ನು ಬರೆದರು.

### ೫. **ಜೈನಧರ್ಮ ಸ್ಥಾಪಕರು : ಆದಿತೀರ್ಥಂಕರರು.**

ಜೈನಮತ ಪ್ರವರ್ತಕರನ್ನು ತೀರ್ಥಂಕರರೆಂದು ಕರೆಯಲಾಗಿದೆ. ಇಪ್ಪತ್ತೊಂದು ತೀರ್ಥಂಕರರಲ್ಲಿ ಋಷಭನಾಥನೇ ಮೊದಲ ತೀರ್ಥಂಕರ (ಆದಿನಾಥ ಎನ್ನುತ್ತಾರೆ). ಭಾಗವತ ಪಂಚಮಸ್ಕಂಧ ೨೫೮–೨೬೧ರಲ್ಲಿ (೬/೪ ಅಧ್ಯಾಯ) ಉಲ್ಲೇಖಿತ ವೃಷಭನಾಥ ರಾಜ ಮೇರುದೇವಿಯಲ್ಲ. ಶ್ರೀಹರಿ ಋಷಭಾವತಾರ ಹೊಂದಿ ಸನ್ಯಾಸಧರ್ಮ ನಿರೂಪಿಸಿದ. ಈ ಋಷಭದೇವನನ್ನು ಜೈನರು ಆದಿತೀರ್ಥಂಕರನೆಂದು ಹೇಳುತ್ತಾರೆ. ಆದರೆ ಈತನು ನಾರಾಯಣಾವತಾರವೆಂದು ಪರಿಗಣಿಸುವುದಿಲ್ಲ. ಈತನ ಉಪದೇಶವೇ ಜೈನಧರ್ಮವಾಗಿದೆ. ಇಲ್ಲಿ ಶ್ರೀಮದ್ಭಾಗವತದಲ್ಲಿ ಹೀಗೆ ಇದೆ. ಋಷಭಾವತಾರ ಪೂರ್ವಕಥ.

ನಾಭಿರಾಜನು ಯಜ್ಞಮಾಡಿ ಶ್ರೀಹರಿಯನ್ನು ಪ್ರತ್ಯಕ್ಷಿಸಿಕೊಂಡು ಪರಮಾತ್ಮನ ಸಮಾನ ರೂಪ ಗುಣಗಳಿಂದಿರುವ ಪುತ್ರನನ್ನು ಕರುಣಿಸೆಂದು ಬೇಡಿದರು.

ಶ್ರೀಮನ್ನಾರಾಯಣ ಹೇಳಿದ. ಋಷಿಬ್ರಾಹ್ಮಣರೇ ನೀವು ಹೇಳಿದಂತೆ ಸರ್ವೇಶ್ವರನು ಸರ್ವೋತ್ತಮನು ಆಗಿರುವನು. ಆದರೆ ನೀನು ಪ್ರಾರ್ಥಿಸಿದಂತೆ ನನ್ನಂತೆ ಸಮಾನ ಪುತ್ರ ಬೇಕೆಂದು ಏನು ಹೇಳಿದಿರಿ ಅದು ದುರ್ಲಭ. ಕಾರಣ ನನ್ನ ಸಮಾನರು ಬೇರೆ ಯಾರೂ ಇಲ್ಲ. ಆಗಲೂ ಸಾಧ್ಯವಿಲ್ಲ. ನನಗೆ ಸಮಾನ ನಾನೇ ಆಗಿರುವೆನು. **ಮಮಸದೃಶೋಭೂಯಾದಿತಿ ಮಮಾಹ ಮೇವಾಭಿರೂಪಃ ಕೈವಲ್ಯಾದಧಾಪಿ**

**ಬ್ರಹ್ಮವಾದೋ ನ ಮೃಷಾಭವಿತುಮರ್ಹತಿ ಮಮೈವಹಿ ಮುಖಂಯದ್ ದ್ವಿಜದೇವ ಕುಲವ್ । ತತ ಅಗ್ನೀರ್ಧೆಂಯೋ ಕ್ರೇತ್ರೇಹಂ ಕಲಂಯಾಽವತರಿಷ್ಯಾಮಿ ಆತ್ಮತುಲ್ಯಮಲಭಮಾನಃ ॥**

ಹೀಗೆ ಹೇಳಿ ಅವತರಿಸಿ ಪರಮಾತ್ಮನು ಶಿಶು ರೂಪದಲ್ಲಿದ್ದರೂ ರೂಪ, ವೀರ್ಯ ವಜ್ರಾಂಕುಶಾದಿ ಚಿಹ್ನೆಗಳಿಂದ ಶೋಭಿಸಿರುವುದನ್ನು ಕಂಡು **"ಋಷಭ"** ಎಂದು ನಾಮಕರಣ ಮಾಡಿದರು. (ಋಷ್‌ಜ್ಞಾನೇ ಋಷಭ ಜ್ಞಾನಿಶ್ರೇಷ್ಠಂ) ಋಷಭದೇವ (ದಿಗಂಬರನಾಗಿ ಸನ್ಯಾಸಿಗಳ ಧರ್ಮ ನಿತ್ಯ ನೈಷ್ಟಿಕ ಬ್ರಹ್ಮಚರ್ಯ ಇತ್ಯಾದಿ ಕಠಿಣ ವ್ರತವನ್ನು ಉಪದೇಶ ಮಾಡಿದನು) ಇಷ್ಟನ್ನು ಮಾತ್ರ ತಿಳಿದು ಅವನನ್ನು ಋಷಭನಾಥನೆಂದೂ ಆದಿತೀರ್ಥಂಕರನೆಂದೂ ತಿಳಿದಿರುತ್ತಾರೆ.

ಆದರೆ ಅವರ ಧರ್ಮಕ್ಕೂ ಬೌದ್ಧಧರ್ಮಕ್ಕೂ ಹೆಚ್ಚೇನೂ ವ್ಯತ್ಯಾಸವಿರುವುದಿಲ್ಲ. ಜೈನಧರ್ಮದ ಪ್ರವರ್ತಕರು ಇಪ್ಪತ್ತೊಂದು ತೀರ್ಥಂಕರರಲ್ಲಿ ಕೊನೆಯ ತೀರ್ಥಂಕರ ಮಹಾವೀರ.

ಸಿಖ್ಖರ ಧರ್ಮವನ್ನು ಗುರುನಾನಕ್ ಎಂಬಾತನು ಪಂಜಾಬಿನಲ್ಲಿ ಸ್ಥಾಪಿಸಿದ. ಅವರು ಬರೆದ ಗ್ರಂಥವೇ **"ಆದಿಗ್ರಂಥ"**ವು. ಇದನ್ನೇ ಸಿಖ್ಖ ಜನಾಂಗ ಪೂಜಿಸುತ್ತಾರೆ. ಈ ಮೂರು ಧರ್ಮಗಳಲ್ಲಿ ಬೌದ್ಧ ಜೈನಮತವು ಭಗವಂತನ ಅಸ್ತಿತ್ವವನ್ನು ಒಪ್ಪುವುದಿಲ್ಲ. ಸಿಖ್ಖರು ಭಗವಂತನ ಅಸ್ತಿತ್ವವನ್ನು ಒಪ್ಪಿದರೂ ಭಗವಂತನ ಆಕಾರ ಗುಣಗಳ ಬಗ್ಗೆ ತಿಳಿದೂ ಇಲ್ಲ, ವರ್ಣಿಸುವುದೂ ಇಲ್ಲ.

ಮುಖ್ಯವಾಗಿ ಈ ಮೂರು ಧರ್ಮಗಳು ವೇದಗಳಲ್ಲಿನ ತತ್ವಗಳನ್ನೇ ಬೇರೊಂದು ರೀತಿಯಲ್ಲಿ ತಿಳಿಸುತ್ತಾರೆ. ಆದರೆ, ತಾವು ವೈದಿಕರೆಂದು ಹೇಳಿಕೊಳ್ಳುವುದಿಲ್ಲ.

ಇಷ್ಟೆಲ್ಲಾ ಏಕೆ ವಿವರಿಸಲಾಯಿತೆಂದರೆ, ಲೋಕದಲ್ಲಿ ವೇದಗಳೇ ಅಪೌರುಷೇಯ ಅನಾದಿ ನಿತ್ಯವೆನ್ನುವುದನ್ನು ಸಮರ್ಥ ರೀತಿಯಿಂದ ತಿಳಿಸಲು A Comparitive look at various Religions is necessary to establish that VEDAS are the most ancient no beginning, is secreted and are Eternal and none have written them. It is an unwritten constitution. ಮುಂದೆ ವೇದಗಳಲ್ಲಿ ಏನು ಹೇಳಲ್ಪಟ್ಟಿದೆ, ಏನು ಬೋಧಿಸುವುದು ಎನ್ನುವುದನ್ನು ತಿಳಿಸಲಾಗುವುದು.

ಶೋಧನೆ ಸಂಗ್ರಹ ಮತ್ತು ವಿವರಣೆ
**ಪ್ರೊ॥ ಪಂ॥ ಬದರೀನಾಥಾಚಾರ್ ಘೂಳಿ ಎಂ.ಎ.**
೨೦-೦೮-೨೦೦೮